

ಕೊರವಂಜಿ



ಸಂಪುಟ ೭ | ಜುಲೈ ೧೯೪೮ | ಸಂಚಿಕೆ ೪

ಕುಹಕಿಡಿಗಳು

ಹಿಸ್ ಎಕ್ಸೆಲೆನ್ಸಿ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್ ಆಫ್ ಬರ್ಮ ಅವರ ಸ್ಥಾನಕ್ಕೆ—
ಹಿಸ್ ಎಕ್ಸೆಲೆನ್ಸಿ ಚಕ್ರವರ್ತಿ ರಾಜಗೋಪಾಲಚಾರಿ ಆಫ್ ಸೇಲಂ ಅವರು ಬಂದಿರುವರಂತೆ.

* * *

'ಪಾನನಿರೋಧ'ವನ್ನು ಸಂಪೂರ್ಣ ಆಚರಣೆಗೆ ತಂದಮೇಲೆ 'ಪೆಟ್ರೋಲ್' ಖೋತಾ ಆದರೂ ಪರವಾಗಿಲ್ಲ ಎಂದು ವಾಚಕರೊಬ್ಬರು ಬರೆದಿದ್ದಾರೆ.

* * * *

"ಸರ್ಕಾರಕ್ಕೆ ಮಾರೋವಾಗ ಪಲ್ಲಕ್ಕೆ ಮೂವತ್ತರ ಹಾಗೆ ಮಾರಬಹುದು. ಏಕೆಂದರೆ ಏನು ಕೊಟ್ಟರೂ ಕೊಳ್ಳುತ್ತಾರೆ. ಆದರೆ ಅಂಗಡೀಲಿ ಹಾಗೆ ಮಾರು ಕ್ಕಾಗುತ್ತೆಯೇ? ಒಳ್ಳೇ ಮಾಲೇ ಮಾರಬೇಕು, ಅದು ಎಂಬತ್ತಕ್ಕೆ ಕಡಿಮೆ ಹೇಗೆ ಮಾರೋದಕ್ಕಾಗುತ್ತೆ" ಎಂದು ಜಮೀನ್ದಾರರೊಬ್ಬರು ಪತ್ರ ಬರೆದಿದ್ದಾರೆ.

* * * *

ರಾಜಕೀಯ ಸಮಸ್ಯೆಗಳು ಈಗ ಮೂಲವಾಗಿ ಮೂರೇ ಉಳಿದಿವೆಯಂತೆ—
—ರಾಜರು ಬೇಕೇ ಬೇಡವೇ?
ದಿವಾನರು ಬೇಕೇ ಬೇಡವೇ?
ಸರ್ಕಾರ ಬೇಕೇ ಬೇಡವೇ?

ಲಂಡನ್ನಿನ ' ಜೂ 'ಗೆ ಮೈಸೂರಿನಿಂದ ಎರಡು ಆನೆಗಳನ್ನು ಕಳಿಸುತ್ತಾರಂತೆ

—ಈ ಬಿಳೀ ಆನೆಗಳನ್ನು ಕಳಿಸಬಾರದೆ ?

* * * *

ಈಸಾರ್ತಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರೆಲ್ಲಾ ಓದು ಮುಂದುವರೆಸುತ್ತಾರೆ—

—ನಪಾಸಾದವರು ರಾಜಕೀಯಕ್ಕೆ ಇಳಿಯುತ್ತಾರೆ ಎಂಬುದು ಶುದ್ಧ ಸುಳ್ಳಂತೆ.

* * * *

ಭಿಕ್ಷುಕರ ಬಡಾವಣೆಯಲ್ಲಿ ಕೂಡ ಶಾಲಾ ಮಾಸ್ತರುಗಳಿಗೆ ವಾಸಿಸಲು ಸ್ಥಳ ಕೊಡುವುದಿಲ್ಲವಂತೆ.

* * * *

ವಿನ್‌ಸ್ಟನ್ ಚರ್ಚಿಲ್ಲರು ನಿಜಾಂರವರ ರಾಜಕೀಯ ಸಲಹೆಗಾರರಾಗಿ ಹೈದ್ರಾಬಾದಿಗೆ ಬಂದು ನೆಲಸುತ್ತಾರೆಂಬುದು ಶುದ್ಧ ಸುಳ್ಳಂತೆ.

* * *

ಸಿಕಂದರಾಬಾದಿನಲ್ಲಿ ಈ ಸಾರಿ ಕುದುರೆ ಜೂಜು ಇಲ್ಲವಂತೆ.

—ಅಲ್ಲಿ ಹಿಂದೂಗಳೇ ಜೂಜು ಕಟ್ಟಿ ಓಡುತ್ತಿದ್ದಾರಂತೆ

* *

ಬೀಗಂ ರಜ್ವಿಯವರು ' ಜನಾನ್ಯಾರಜಕಾರರ ' ಸಂಸ್ಥೆಯೊಂದನ್ನು ಏರ್ಪಡಿಸಿದ್ದಾರಂತೆ.

—ಓಹೋ ! ಯಾವ ಕಾನೂನೂ ಮುರಿಯದೆ ಘೋಷಾ ಯುದ್ಧಮಾಡಲೋಸುಗವೋ ?

* * *

ಪೆಟ್ರೋಲಿಗೆ ಬದಲಾಗಿ ರಜಕಾರರು ಕಡಲೇಕಾಯಿ ಎಣ್ಣೆ ಉಪಯೋಗಿಸುತ್ತಿರುವರಂತೆ.

—ಕಡಾಣೀಗೆ ಹಾಕೋಕ್ಕೆ ಯಾವ ಎಣ್ಣೆಯಾದರೇನು ?

* * *

ಕಾಶ್ಮೀರ ಸಮಸ್ಯೆ ಮುಗಿಶ್ಯಾ ನೋಡಲು ಬರುವ ಯುನೋ ಕಮಿಷನ್ನಿನವರು ಮೊದಲು ಹೈದ್ರಾಬಾದಿಗೆ ಬಂದು ಹೋಗಲಿ ಎಂದು ಖಾಸಿಂ ರಜ್ವಿಯವರು ಇನ್ನೂ ಹೇಳಲಿಲ್ಲವಂತೆ.

* * *

ಅಖಿಲ ಕರ್ಣಾಟಕದಲ್ಲಿ ಮಾಳ್ವಾ ಮಂಗಳೂರು ಭಟ್ಕಲ್ ಬಂದರ್ ಸಮಸ್ಯೆಯಂತೇ—

—ಹೈದ್ರಾಬಾದಿನಲ್ಲಿ ಗೋವಾ– ಮಚಲೀಬಂದರ್ ಸಮಸ್ಯೆ ಉಂಟಾಗಿದೆಯಂತೆ.

* * * *

—o—

ಉರಿಗಾಳು

"೧೨ ವರ್ಷಕ್ಕಿಂತ ಕಡಮೆ ವಯಸ್ಸಿನ ಚಿಕ್ಕಮಕ್ಕಳನ್ನು ಕರೆತರಬಾರದು" (ಜಾಹಿರಾತು)....ಇತರ ಗಾಯಕರು ಹಾಡುವ ಕಾರ್ಯಕ್ರಮವನ್ನಿಟ್ಟುಕೊಂಡಾಗ, ನಡೆಸಲೇಬೇಕಾದ ಎಚ್ಚರಿಕೆ ಏರ್ಪಾಟನ್ನು, ಶ್ರೀಮತಿಯವರಿಗೂ ಅನ್ವಯಿಸುವುದು ಆಕೆಗೆ ಅನ್ಯಾಯವೇ ಸರಿ ;

* * *

"ಈ ಬಿಳಿಯರು ನಮಗೆ ಎಷ್ಟೇ ಕಷ್ಟಪರಂಪರೆಗಳನ್ನು ತಂದೊಡ್ಡಿದರೂ, ನಾವು ಇಲ್ಲೇ ಇರುತ್ತೇವೆ, ಪಾಕಿಸ್ತಾನಕ್ಕೆ ಹಿಂತಿರುಗುವುದಿಲ್ಲ" (ದ. ಆಫ್ರಿಕಾದ ಮುಸ್ಲಿಮರು)....

* * *

"ಇಂಡಿಯಾ ದೇಶದ ಚರಿತ್ರೆಯ ಒಂದೆರಡು ಅಧ್ಯಾಯಗಳನ್ನು ನಾವು ಮರೆತರೆ ಒಳ್ಳಿತು" (ರಾಜಾಜಿ).... ಎಳೆ ಹುಡುಗರೂ ಅನುಮೋದಿಸುವಂತಹ ಸೂಚನೆ, ಇದು.

* * *

ಚೆನ್ನಾಗಿ ಮಡಿಸಿ ಜೋಡಿಸಿ ಕೂಡಿಸಬಲ್ಲ ಹೊಸ ಬಗೆಯ ರೈಲುಪ್ರಯಾಣಿಕರನ್ನು ತಯಾರು ಮಾಡಲು, ಹೊಸ ರೀತಿಯ ಅಂಗಸಾಧನೆಗಳನ್ನು ಶಾಲಾ ಕಾಲೇಜುಗಳಲ್ಲಿ ಕಲಿಸಬೇಕೆಂದು ತಜ್ಞರು ಅಭಿಪ್ರಾಯ ಪಟ್ಟಿದಾರೆ

* * *

ಪ್ರಶ್ನೆ :—ಹಣವನ್ನು ಚೆಲ್ಲಿ, ಓಟುಗಳನ್ನು ಕೊಂಡು ಚುನಾವಣೆಯಲ್ಲಿ ಗೆಲ್ಲಲು ನನ್ನ ಮನ ಒಪ್ಪದು" ಎಂದು ನೀವು ಭಾಷಣ ಮಾಡಿದಾಗ, ಸಭಿಕ ಮಹಾಜನಗಳು ಏನು ಮಾಡಿದರು ?

ಉತ್ತರ :—ಚೆದುರಿ, ಮನೆಗಳಿಗೆ ತೆರಳಿದರು.

* * *

ಬೆಂಗಳೂರಲ್ಲಿ ಬೆಳಗ್ಗೆ ಆರೂವರೆಗೇನೆ ನಲ್ಲಿಗಳಲ್ಲಿ ನೀರು ನಿಂತುಹೋಗುತ್ತಿದೆಯಾದರೂ ಪ್ರತಿ ಮನೆಗೂ ಹಾಲಿನವರು ಅಷ್ಟರೊಳಗೇನೇ ತಂದುಕೊಡುತ್ತಿರುವುದರಿಂದ ನಾಗರಿಕರಿಗೆ ಅಷ್ಟು ತೊಂದರೆ ತೋರುತ್ತಿಲ್ಲ.

* * *

ಶಾಯಿ ಕಾಗದ ಇವೆರಡರ ಸಹಾಯದಿಂದಲೇ ಪೆಟ್ರೋಲನ್ನು ಉಂಟು ಮಾಡುವ ವಿಧಾನವನ್ನು ನಮ್ಮೂರಿನ ಹಲವು ವಿಜ್ಞಾನಿಗಳು ಕಂಡು ಹಿಡಿದಿರುವ ರೀತಿ

* * *

ತಮ್ಮನ್ನು ಉಟ್ಟಬಟ್ಟೆ ಕಿತ್ತು ಬೆತ್ತಲೆ ಕಳಿಸಿದ ಜನರಿಗೆ, ಇಂಡ್ಯಾದಿಂದ ಗುಪ್ತವಾಗಿ ಮೂಟೆಗಟ್ಟಲೆ ಬಟ್ಟೆಯನ್ನು, ಹಲವರು ಹಿಂದೂ-ಸಿಖರು ರವಾನಿಸುತ್ತಿರುವರಂತೆ........ಚಿನ್ನದ ಗುಣ ಅಂದರೆ, ಅದು !

* * *

ಇನ್ನುಮುಂದೆ, ಮಂತ್ರಿಗಳು ತಮ್ಮ ಪ್ರವಾಸ ಕಾಲದಲ್ಲಿ ಚಹಾಪಾನ, ಸತ್ಕಾರಕೂಟ, ಹಾರಾತುರಾಯಿ ದಾನ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗ ವಹಿಸುವುದಿಲ್ಲವೆಂದೂ, ಇತರ ಕೆಲಸಕಾರ್ಯಗಳ ದೃಷ್ಟಿಯಿಂದ ಹೀಗೆ ಆಜ್ಞೆ ಹೊರಡಿಸಬೇಕಾಯಿತೆಂದೂ ಪ್ರಕಟವಾಗಿದೆ....ಅಂಥ ಕೆಲಸಕಾರ್ಯಗಳು ಏನಿರಬಹುದು ?

* * *

ಅಖಂಡ ಕರ್ನಾಟಕ, ಅಖಂಡ ಆಂಧ್ರ, ಅಖಂಡ ಮಹಾರಾಷ್ಟ್ರ— ಈ ಮೂರು ಪ್ರಾಂತಗಳಲ್ಲೂ ಅವುಗಳ ಸ್ಥಾಪನೆಗಾಗಿ ಈಗ ದುಡಿಯುತ್ತಿರುವ ಖಾಸಿಂ ರಜ್ವಿಯವರ ಶಿಲಾಪ್ರತಿಮೆಯನ್ನಿರಿಸುವ ಸಲಹೆ ಬಂದಿದೆ.

* * *

ಮದ್ರಾಸ್ ಸರ್ಕಾರ ಕೊಂಡುಕೊಂಡಿರುವ ವಿಮಾನಕ್ಕೆ ಹನುಮಾನ್ ಎಂಬ ಹೆಸರನ್ನಿಡಲಾಗಿದೆ....ಈಗಿನ ಮುಖ್ಯ ಮಂತ್ರಿಗಳು ಸ್ಥಾನಚ್ಯುತರಾದರೆ, ಇದೇ ಹೆಸರನ್ನುಳಿಸಲಾಗುತ್ತದೆಯೆ ?

* * *

ಸರ್‌ವಾಲ್ಟರ್ ಮಾಂಕ್‌ಟನ್‌ರವರ ಸ್ಥಾನದಲ್ಲಿ ತಿರುವಾಂಕೂರಿಗೆ ಸ್ವಾತಂತ್ರ್ಯ ಬೋಧನೆ ಮಾಡಿದ ಸರ್ ಸಿ. ಪಿ. ಯವರನ್ನು ನೇಮಿಸಲಾಗುವುದೆಂಬ ವದಂತಿ ಹಬ್ಬಿದೆ ...ತುಂಬ ಪ್ರಶಸ್ತವಾದ ಆಲೋಚನೆ !

* * *

" ಹೊಸ ಮಂತ್ರಿಗಳು ಸಭಾ ಭೂಷಣರು ! " (ಪತ್ರಿಕೆ)....ಅವರೆಲ್ಲರೂ ಈ ಪ್ರಶಂಸೆಗೆ ಅರ್ಹರೆ, ಎಂಬುದು ನಮ್ಮ ಪ್ರಶ್ನೆ.

* * *

—— o ——



ಕೊರವಂಜಿಯ

ಅಭಿವಂದನೆಗಳೊಂದಿಗೆ—

ಢಮಾರ್ ಹಳದಿ ಟ್ರಂಕು

ಮಾರ್ಕೆಟ್ ಚೌಕ. ಸಾಯಂಕಾಲ. ಬಸ್ಸಿಗಾಗಿ ಕಾದಿರುವ ಜನರ ಗುಂಪೋ ಗುಂಪು. ಚೌಕದ ಮೂಲೇಲಿ, ರಸ್ತೆ ಅಂಚಿನಲ್ಲಿ, ಹಳೇ ಹಳದಿ ಟ್ರಂಕಿನಮೇಲೆ ನಿಂತುಕೊಂಡು ಒಬ್ಬಾತ, ಎರಡು ಹಲ್ವಾ ಡಬ್ಬಿಗಳನ್ನು ಹಿಡಿದುಕೊಂಡು ಉಪನ್ಯಾಸಕ್ಕೆ ಆರಂಭಿಸಿದ್ದ.

"ಬನ್ನ್ರೀ, ಬನ್ನ್ರೀ, ನೋಡ್ರಿ. ಹಿಮಾಲಯದ ಋಷಿಗಳಿಂದ ಕಲಿತು ಬಂದು ಈ ಹಲ್ವಾ ತಯಾರಿಸಿದ್ದೇವೆ ಒಂದು ಡಬ್ಬಿ ತಿಂದರೆ ನಾಕು. ನವಚೈತನ್ಯ ಉಂಟಾಗುತ್ತೆ. ಮಹಾಭಾರತದ ಕಾಲದಲ್ಲಿ ಈ ಹಲ್ವಾ ಇದ್ದಿದ್ದರೆ, ಮಹಾ ಭಾರತ ಯುದ್ಧವೇ ಬೇರೆ ರೀತಿಯಾಗುತ್ತಿತ್ತು. ಏಕೆ ಅಂದರೆ ಆಗ ಶಿಖಂಡಿ ಇರುತ್ತಲೇ ಇರಲಿಲ್ಲ. ಇರಲು ಆಗುತ್ತಲೇ ಇರಲಿಲ್ಲ. ಅದಕ್ಕೇ! ಬನ್ನಿ್ರ, ಬನ್ನಿ್ರ"

ನಾನೂ ಬಸ್ಸಿಗಾಗಿ ಅಲ್ಲೇ ಕಾಯುತ್ತಿದ್ದೆ. ಇವನು ಹೇಳೋದೆಲ್ಲಾ ಕೇಳುತ್ತಲೇ ಇದ್ದೆ. ಅವನ ಹತ್ತಿರ ನಾಲ್ಕುಜನ ಬಂದು ನಿಲ್ಲಬೇಕಲ್ಲ! ಒಂದು ನಾಯಿಪಿಳ್ಳೆ ಕೂಡ ಅವನ ಹತ್ತಿರ ಬರಲೊಲ್ಲದು. ವೃಥಾಕಂಠಶೋಷಣೆ—

ಇದಾದ ಒಂದು ವಾರದಮೇಲೆ ಕಾಲೇಜು ರಸ್ತೆಯಲ್ಲಿ ಸಾಯಂಕಾಲ ಹೋಗುತ್ತಿದ್ದೆ. 'ಢಮಾರ್' ಎಂಬ ಸದ್ದಾಯ್ತು. ಏನಪ್ಪಾ ಎಂದು ನೋಡಿದೆ. ಒಬ್ಬ ಸೈಕಲ್ ಸವಾರ ಜೋರಾಗಿ ಒಂದು ಸಣ್ಣ ಹಳದಿ ಟ್ರಂಕನ್ನು ಕ್ಯಾರಿಯರ್ರಿಗೆ ಕಟ್ಟಿಕೊಂಡು ಬರುತ್ತಿದ್ದ. ಅವನ ಸೈಕಲ್ 'ಟೈರು' ಹಠಾತ್ತನೆ ನಿಟ್ಟುಸಿರು ಬಿಟ್ಟಿದ್ದಿರಬೇಕು. ಅದೇ 'ಢಮಾರ್' ಶಬ್ದ. ನನ್ನಂತೆಯೇ ಆ ಕಡೆ ರಸ್ತೆಯಲ್ಲಿದ್ದ, ಮನೆಗೆ ಹೋಗುತ್ತಿದ್ದ ಕಾಲೇಜಿಗರು, ಕಾರಕೂನರು, ನೌಕರರು ಎಲ್ಲಾ ಅವನ ಕಡೆಗೇ ನೋಡಿದರು. ಅವನು ಕೆಳಗೆ ಬಿದ್ದಿದ್ದನ್ನೂ ನೋಡಿದರು ಎರಡೇ ನಿಮಿಷ ನೋಡಿ, ಎಲ್ಲರೂ ಅವನ ಹತ್ತಿರಕ್ಕೆ ಓಡಿದರು.

'ಹಾಳು ರಸ್ತೆ ಕಣಯ್ಯಾ—ಸರಿಯಾಗಿ ರಸ್ತೆ ರಿಪೇರಿ ಮಾಡಿಸುಲ್ಲ ಬೈಸಿಕಲ್ಲಿಗೆ ಲೈಸೆನ್ಸ್ ದುಡ್ಡು ಬೇರೆ'

'ಬೈಸಿಕಲ್ ಹತ್ತಿದರೇನೇ ತಲೆ ಆಕಾಶದಲ್ಲಿರುತ್ತಯ್ಯಾ. ಹುಷಾರಾಗಿ ಹೋಗೆಬಾರದೆ'

'ಈಗಿನ ಕಾಲದ ಸೈಕಲ್ ಟೈರುಗಳೇ ಹೀಗಯ್ಯ, ಎಲ್ಲಾ 'ಸಿಂತೆಟಿಕ್' ಎಲ್ಲಾ ಕೃತಕ'

ಈರೀತಿ ಗುಂಪು ಕೂಡಿದವರ ಗುಸು ಗುಸು ಪಿಸು ಪಿಸು. ಆದರೆ ಸುಮಾರು ಗುಂಪು ಕೂಡಿತ್ತು- ಬಿದ್ದವನು ಏನಾದ ಎಂದು ನೋಡಲು ಅಲ್ಲಿಗೆ ನಾನು ಹೋದಾಗ ಅವನೆದ್ದು ನಿಂತಿದ್ದ. ಹಳದಿ ಟ್ರಂಕು ತೆರೆದಿದ್ದ.


'ಬನ್ನಿರೀ, ನೋಡ್ರೀ, ಹಿಮಾಲಯದ ಋಷಿಗಳಿಂದ' ಷುರು ಮಾಡಿದ್ದ. ಆ ಗಟಾಟೀಲಿ ಒಂದು ನಾಲ್ಕು ಜನ ಧಡೂತಿ ಯುವಕರು ನಾಲ್ಕು ಡಬ್ಬ........ ಹಲ್ಪಾವನ್ನೂ ಕೊಂಡರು

ಅಲ್ಲಾ, ಗುಂಪು ಕಟ್ಟಲು ಇವ ಸೈಕಲ್ ಟ್ಯೂಬನ್ನು ಹೇಗೆ ಫಡಾಯಿಸಿದ ಎಂದು ಯೋಚಿಸುತ್ತಿದ್ದೆ. ಅಷ್ಟರಲ್ಲಿ ಗುಂಪೂ ಕರಗಿತ್ತು ಅವನೂ ಹಳದೀ ಟ್ರಂಕನ್ನು ಮುಚ್ಚುತ್ತಿದ್ದ.

ಧೈರ್ಯಮಾಡಿ ಕೇಳಿಯೇ ಬಿಟ್ಟೆ- 'ಇದು ಹೇಗಯ್ಯಾ ಮಾಡಿದೆ' ಅಂತ,

"'ಟೈರು' ಢಮಾರಾಗಿಯೇ ಇಲ್ಲ. ಬೇಲೂನ್ ಒಂದನ್ನು ಪಡಾಯಿಸಿ, ಧಡಾರನೆ ಬ್ರೇಕ್ ಹಾಕಿ ನಾನೇ ಬಿದ್ದೆ. ನನಗೆ ಪೆಟ್ಟು ಆಗಿರಬಹುದೋ ಎಂದೇ ಜನ ಸೇರುವುದು. ಹಾಗೆ ಮಾಡಿದರೇ ಗುಂಪು ಸೇರುವುದು. ನಾಲ್ಕು ಡಬ್ಬ ಖರ್ಚಾಗುವುದು. ಇಲ್ಲದೇ ಇದ್ದರೆ ಜನ ಜಮಾಯಿಸುವುದು ಅಸಾಧ್ಯ ಈ ಊರಲ್ಲಿ" ಎಂದು ಹೇಳಿ ಬೈಸಿಕಲ್ ಹತ್ತಿಕೊಂಡು ಹೊರಟೇ ಹೋದ

—ಶಿವಣ್ಣ.



ನಮ್ಮ ಹೊಟ್ಟೆಗೇನೂ ಇಲ್ಲ

—ಇನ್ನೊಬ್ಬರ ಹೊಟ್ಟೆಗೆ ನಾವೂ ಆಗಕೂಡದಂತೆ, ಕೇಳಿದೆಯೇನೆ?

★ " ಸತ್ವ ರಜಸ್ ತಮೋ " ★

ಸತ್ವಗುಣದವರೆಲ್ಲಾ ನಿಜಾಂಸಾಗರದ ಅಂಚಿನಲ್ಲೋ ಅರುಣಗಿರಿ ಕಿಬ್ಬಿಯಲ್ಲೋ ಇರುತ್ತಾರಂತೆ. ಅವರು ಇದ್ದರೂ ಒಂದೇ, ಇಲ್ಲದಿದ್ದರೂ ಅಷ್ಟೇ ಅಂತೆ ಉಳಿದವರಿಗೆ

ರಜೋ ಗುಣದವರೆಲ್ಲಾ ಸಂಘ ಕೂಡಿ ರಜಕಾರರೆನಿಸಿ ರಾಕ್ಷಸ ಚೈತನ್ಯದಿಂದೊಡಗೂಡಿ, ರಂಗೆಬ್ಬಿಸಿ ಧಾಳಿ ಮಾಡಿ, ರೂಪಾಯಿ ಸಂಪಾದಿಸಿ, ರಕ್ತ ಓಕುಳಿಯಾಡುತ್ತಾರಂತೆ – ಸಾಯುವ ಮುನ್ನ.

ತಮೋ ಗುಣದವರೆಲ್ಲಾ, ತಾಪತ್ರಯಕ್ಕೆ ಸಿಲುಕದೆ, ತಾತ್ಸಾರಮೂರ್ತಿಗಳಾಗಿ, ತಮ್ಮದೇ ಪಂಗಡ ಕಟ್ಟಿಕೊಂಡು ಅಧಿಕಾರ ತಂತ್ರಗಳನ್ನು ಹಿಡಿದುಕೊಂಡು 'ತಮಸೋವಾ ತಮಸರ್ಗಮಯಾ' ಎಂದು ಉಪನಿಷದ್ವಾಕ್ಯಗಳಿಗನುಸಾರವಾಗಿ ಕಣ್ಣಿಲ್ಲದವ ಕುರುಡನಿಗೆ ದಾರಿ ತೋರಿದಂತೆ, ತತ್ತರಿಸುತ್ತಾ ನಡೆವರಂತೆ—ಹಿಂಬಾಲಿಸಿದವರೆಲ್ಲಾ ಸಾಯುವ ತನಕ—

—o—



ಹೈದ್ರಾಬಾದಿನಲ್ಲಯ್ಯಾ- ಪ್ರಾಕ್ಟೀಸ್ ಅಂದರೆ- ಪ್ರಾಕ್ಟೀಸ್-

- ಅವಕ್ಕೇ ಅಲ್ಲಿ ಸಂಪಾದಿಸಿದ್ದನ್ನು ಅಲ್ಲೇ ಬಿಟ್ಟು ಬರೋಹಾಗಾಗಿದ್ದು ನಿಮಗೆಲ್ಲಾ.

ಹಳೆಯ ಚಿತ್ರ


(ಚಿತ್ರ ಪ್ರೇಕ್ಷಕನ ಕೊರಗು)

ಯಾವುದಾದರು ಒಂದು
ಹಳೆಯ ಚಿತ್ರವೇ ಸಾಕು
ಹೊಸ ಗಾನ—ಹೊಸ ನೃತ್ಯ
ಹೊಸ ದೃಶ್ಯಗಳ ಮೇಳ
—ಬರಿಯ ಬೇಸರ ಹೇಳಾ-
ಯಾವುದೊಂದೂ ಬೇಡ.

ತಲೆಯ ನೋವನು ಕೊಡದ
ಕಣ್ಣ ನೀರನು ತರದ
ಹೊಸ ಇಸಮು* ಹೊಸ ಧ್ಯೇಯ
ಯಾವುದೊಂದನು ಕೊಡದ
ಹನ್ನೊಂದು ಸಾವಿರಡಿ
ಹಳೆಯ ಚಿತ್ರ !

[ಶ್ರೀ ಅನಂತನಾರಾಯಣರ ಹಕ್ಕನ್ನು ಧಿಕ್ಕರಿಸದೆ.]

* ism (ಉದಾಹರಣೆಗೆ nudism)



ಏನನ್ಯಾಯ ಅಂತೀರಿ—

ನನ್ನ ಮೊಮ್ಮೊ ಮ್ಮೊ......ಗಳು ನನ್ನ ಸೊಮ್ಮೊ ಮ್ಮೊ......ಗನನ್ನೇ ಕಾನೂನು ಪ್ರಕಾರ ಮದುವೆ ಆಗಬಹುದಂತಲ್ಲಾ !

೩

ಬಿಲ್ಲೆಗೆ ತಕ್ಕ ಭಾರ

ನಮ್ಮೂರು ರೈಲುಸ್ಟೇಷನ್ನಿನಲ್ಲಿರುವ ತೂಕಸೂಚಿ ಯಂತ್ರ (ವೈಯಿಂಗ್ ಮೆಷೀನ್)ವನ್ನು ನೀವು ನೋಡಿರಬಹುದು. ಸಾಮಾನ್ಯವಾದ ನಿಮ್ಮಂಥ ಮಾನವ ಪಶುಗಳಂತೆ ಆ ಯಂತ್ರಕ್ಕೂ ಬುದ್ಧಿ ಶಕ್ತಿ, ಹಾಸ್ಯಾಭಿರುಚಿ ಹಾಗೂ ಕರುಣೆ ಕೋಪೇತ್ಯಾದಿ ಮನೋವಿಕಾರಗಳಿವೆ ಎಂಬುದನ್ನು ಮೊನ್ನೆ ನಮ್ಮ ಸ್ನೇಹಿತರೊಬ್ಬರು ಪತ್ತೆ ಹಚ್ಚಿದರು.

ರೈಲಿಳಿಯುವ ನಂಟರನ್ನು ಇದಿರುಗೊಳ್ಳಲು ನಿಲ್ದಾಣಕ್ಕೆ ಹೋದ ಇವರು, ಎಂದಿನಂತೆ ರೈಲ್ವೇ ಗಡಿಯಾರ ಮುಂದೋಡಿದ್ದರಿಂದ, ಹಾಗೇ ರೈಲಂಗಳದಲ್ಲಿ ಓಡಾಡುತ್ತಿದ್ದಾಗ ಈ ಯಂತ್ರ ಕಣ್ಣಿಗೆ ಬಿದ್ದು ಜೇಬಿನಲ್ಲಿ ಬಹುದಿನದಿಂದ ನಿದ್ರಿಸುತ್ತಿದ್ದ ಸಮುಕಲಾಣೆಯ ಸದುಪಯೋಗಕ್ಕೆ ಸದವಕಾಶವಾಯಿತು. ನಿಮ್ಮ ವಜನ್ನಿನ ಜೊತೆಗೆ ನಿಮ್ಮ ದುರಾದೃಷ್ಟ (ಕಿಸ್ಮತ್)ವನ್ನೂ ತೋರಿಸುತ್ತಲ್ಲಾ ಆದರಿಂದ ಎಗರಿ ಬರುವ ರೊಟ್ಟಿನ ಚೂರು ! ಯಂತ್ರವೇರಿ ತನ್ನ ಭಾರವನ್ನೆಲ್ಲಾ ಬಿಟ್ಟ ಮೇಲೆ ಅತ್ತಿತ್ತನೋಡಿ ಆ ಆಣೆಯನ್ನು ಇಳಿಯ ಬಿಟ್ಟ ಈ ಮಹಾಶಯ. ಕಾರ್ಡೂ ವಜನ್ನೂ ಜೊತೆಗೆ ಈತನ ಹಣೇ ಬರಹವೂ ಹೊರಬಿದ್ದುವು. ನರಪೇತಲನನ್ನು ನಾಲ್ಕಾಗಿ ಸೀಳಿ ಆ ನಾಲ್ಕನೇ ಒಂದು ಭಾಗದ ರಕ್ತಮಾಂಸಗಳನ್ನೂ ತೆಗೆದರೆ ಬರೀ ಮೂಳೆ ಎಷ್ಟಿರುತ್ತೋ ಹಾಗಿದ್ದ ಈ ಪ್ರಾಣಿಯ ವಜನನ್ನು ಆ ಕರುನಾಳು ನಿರ್ಜೀವ ಯಂತ್ರ 140 ಪೌಂಡು ಅಂತ ತೋರಿಸಿದಾಗಿನಿಂದ ಆತನ ಜೀವನವೇ ಬದಲಾಗಿದೆ. ಈಚೆಗೆ ಆತ ಯಾವ ಗುಂಪುಗೊಂದಲಗಳಿಗೂ ಎದೆಬೀಳದೆ ಗರಡಿ ಭೀಮನಂತೆ ಅಡ್ಡಗಾಲು ಹಾಕುತ್ತ ತೋಳು ಮೇಲೆಳೆಯುವುದಕ್ಕಾರಂಭಿಸಿದಾನೆ. ಸಾಲದಕ್ಕೆ ಕಾರ್ಡಿನಲ್ಲಿ ಈತನ ಹಣೇ ಬರಹ "ಮಾಡು ಇಲ್ಲ ಮಡಿ" ಎಂದಿತ್ತಂತೆ.


ಈತನ ಈ ಅನುಭವದ ನಂತರ ಜೀವನದಲ್ಲಿ ಕಂಗೆಟ್ಟ ನಮ್ಮ ಸ್ನೇಹಿತರನೇಕರು ಈ ಯಂತ್ರದ ಶರಣು ಹೊಕ್ಕಿದ್ದಾರೆ. "ನಿಮಗೆ ಇಷ್ಟರಲ್ಲೇ ಮಂತ್ರಿ ಪದವಿಯಾದರೆ ಆಶ್ಚರ್ಯವೇನಿಲ್ಲ" ಎಂಬುದರಿಂದ ಹಿಡಿದು "ನಿಮ್ಮ ಪಿತ್ತಕೋಶವನ್ನು ಕೊರಚ ಹತೋಟಿಯಲ್ಲಿಟ್ಟರೆ ನಿಮ್ಮ ಬಂಧುವರ್ಗದವರಿಗೆ ಕ್ಷೇಮ" ಎನ್ನುವ ತನಕ ಬಹುಮುಖವಾದ ಬುದ್ಧಿವಾದವನ್ನು ನೀಡುತ್ತೆ ಆದರ ಕಿಸ್ಮತ್ ಕಾರ್ಡು ಆನಾಮಿಯ ತೂಕಕ್ಕೂ ಆತನ ಅದೃಷ್ಟಕ್ಕೂ ಹೇಗೆ ನಿಕಟಸಂಬಂಧವಿದೆ ಎಂಬುದನ್ನು ಕೂಡ ಇದರಿಂದ ಕಂಡುಹಿಡಿಯಬಹುದು. ಏಕೆಂದರೆ, 240 ಪೌಂಡಿನ ಒಂದು ವ್ಯಕ್ತಿಗೆ ಈ ಯಂತ್ರದ ಸಲಹೆ ಹೀಗಿತ್ತು, "ನಿಮ್ಮ ಮೈತೂಕ ಹೆಚ್ಚಿದಂತೆಲ್ಲಾ ನಿಮ್ಮ ಸಾಮಾಜಿಕ, ಔದ್ಯೋಗಿಕ ತೂಕ ಕಡಿಮೆಯಾಗುತ್ತೆ ; ಕೂಪಮಂಡೂಕ ಲೇಹ್ಯವನ್ನು ಒಂದು ಕೈ ನೋಡಿ ... ..." ಇತ್ಯಾದಿ.

ಇದೇರೀತಿ ಹೈದ್ರಾಬಾದಿಗೆ ನುಗ್ಗುತ್ತಿರುವ ಹುರುಪಿನ ತರುಣರನೇಕರಿಗೆ 'ಮಾಡು ಇಲ್ಲಾ ಮಡಿ', 'ಹುಚ್ಚುಂ—ಮದುವೇಲಿ ಉಂಡವನೇ ಜಾಣ" 'ಅಡ್ಡೇಟಿನಲ್ಲಿ ಒಂದು ಗುಡ್ ಏಟೂ ಬೀಳಬಹುದು' ಇತ್ಯಾದಿ ಉತ್ತೇಜನ ಕೊಟ್ಟಿರುವುದುಂಟು. ಗಂಡನ ಮನೆಯಿಂದ ಮೊದಲನೇ ಸಾರಿ ತೌರು ಮನೆಗೆ ಹಿಂದಿರುಗಿದ ಹೆಣ್ಣಿಗೆ, 'ತೂಕವೇರಿದರೇನು ಬಂತು ? ಪತಿಯೇ ಪರದೈವವೆಂದು ತಿಳಿ' ಎಂದು ಇತ್ಯಾದಿ ಅಮೂಲ್ಯವಾದ ಮಾತುಗಳಿಂದ ಅನೇಕರ ಮನತಣಿಸಿದೆ. ಸಾವಿರಗಟ್ಲೆ ರೈಲಿಳಿಯುವ ನಿರಾಶ್ರಿತರಿಗೆ 'ಹುಟ್ಟಿಸಿದ ದೇವರು ಹುಲ್ಲುಮೇಯಿಸಲಾರನೆ ? 'ಶೆಟ್ಟಿ ಬಿಟ್ಟಲ್ಲೇ ಪಟ್ಣ', 'ಭೂಮಿ ಗುಂಡಾಗಿದೆ....' ಇತ್ಯಾದಿ ಅಭಯ ಹಸ್ತ ನೀಡಿದೆ.

ಇಂತಹ ಅಮೂಲ್ಯವಾದ ಯಂತ್ರದಮೇಲೆ ಮೊನ್ನೆ ಯಾರೋ ಮಹಾತಾಯಿ — ಬೊಂಬಾಯಿ ಕಡೆಯವರಂತೆ — ಒಂದು ತನ್ನ ಭಾರ ಬಿಟ್ಟಿದ್ದೇ ತಡ, 'ಅಯ್ಯೋ-ಓ-' ಎಂಬ ಆರ್ತನಾದದೊಡನೆ ಯಂತ್ರದ ಮುಳ್ಳು ತನ್ನಮೇಲಿನ ಭಾರ ಸಹಿಸಲಾರದೆ ಸಂಕಟಪಟ್ಟು ಕಿತ್ತುಬಿದ್ದಿದಂತೆ. ಹೊರಚಿಮ್ಮಿದ ಕಾರ್ಡನ್ನು ಓದಿಕೊಂಡು ಆಕೆ ದುರದುರನೆ ಸಿಟ್ಟಿಗೆದ್ದ ಸರ್ಪದಂತೆ ಆ ನಿರ್ಜೀವಿಯಂತ್ರದ ಕಡೆ ನಾಲಗೆ ಚಾಚುತ್ತ ತೊಲಗಿದರಂತೆ. ಸಂಬಂಧಪಟ್ಟ ಮಹನೀಯರು ಯಂತ್ರವನ್ನು ಸರಿಪಡಿಸಿ ಲೋಕೋಪಕಾರ ಮಾಡಬೇಕೆಂದು ಕೋರಲಾಗಿದೆ.

—ಟೀಯಸ್ಸಾರ್ರಾವ್.

—o—




ಕೈಗಾರಿಕಾ ಮಂತ್ರಿಗಳ ಸರ್ಕಸ್

ಅಹುದೋ ? ಅಲ್ಲವೋ ?

—o—

ಅಹುದಾದರಹುದೆನ್ನಿ ! ಇಲ್ಲವಾದರಿಲ್ಲೆನ್ನಿ !
ಬಹುದೆಂಬ ಬಿಂಕನುಡಿ ಬಡಿಯ ಬೇಡಿ.


ನೀತಿ ಇಲ್ಲದ ನಾಡು ಎಕ್ಕ ಬೆಳೆದಾ ಕಾಡು,
ಖಾದಿ ಇಲ್ಲದ ಭಕುತಿ ಕುಹಕ ಯುಕುತಿ,
ಹಿಂದಿ ಇಲ್ಲದ ಜಿಹ್ವೆ, ಕೂಪದಲಿ ಕಪ್ಪೆ .. ....
ನಿರ್ಮಲಿಲ್ಲದ ಗ್ರಾಸ್ತ ಕಜ್ಜಿತಿನಸಿನ ಹಸ್ತ
ಕರ್ಮವಿಲ್ಲದ ಕೂಗು ಬರಿಯಟೊಪ್ಪಿಗೆ ಸೋಗು
ಮರ್ಮವಿಲ್ಲದ ಮಾತು, ಮಡಕೆ ತೂತು.......
ಬುಕ್ಕಲಿಲ್ಲದ ಲೆಕ್ಕ 'ಕುಕ್ಕಿ'ದವನೇ 'ತಗ್ಗು'
ಚೊಕ್ಕವಿಲ್ಲದ ಊರು ಪುಷ್ಪವಿಲ್ಲದ ನಾರು
ಸೊಕ್ಕಿ ನಡೆಯುವ ಮಂತ್ರಿ, ಅಪ ಪೂರ ತಂತ್ರಿ ...
ಗಂಡಿಗಂಜುವನಾರಿ ಬುದ್ಧಿ ಇಲ್ಲದ ಹೇಡಿ
ಗುಂಡಿಗಂಜುವ ಭಂಟ ಸ್ತಂಭಳವೆ ದಂಡ
ಕಂಡದಾಡುವ ಮನುಜ ಕುಂಟೆ, ಸುಖ ಶಾಂತಿ.......



ಆಳು ಮಾಡಿದ ಕೆಲಸ

" ನಿರಾಶ್ರಿತರ ಶಿಬಿರದಲ್ಲಿ ಖಾಯಿಲೆಯುವರೂ ಮಕ್ಕಳೂ ಚಳಿಯಲ್ಲಿ ಕೊರಗುತ್ತಿರುವರು, ಅವರಿಗೆ ವಸ್ತ್ರದಾನ ಮಾಡಿ !" ಎಂಬುದನ್ನು ಪತ್ರಿಕೆಯಲ್ಲಿ ನೋಡಿ, ತಿಮ್ಮಯ್ಯನವರು ಕಂಬನಿ ಸುರಿಸಿ, ತನ್ನ ಮೈಗೆ ಅಂಟಿಕೊಂಡಿದ್ದ ನೆಟ್ ಬನೀನನ್ನು ಬಿಚ್ಚಿ, 'ಲೋ, ಇದನ್ನು ಕಾಗದದಲ್ಲಿ ಸುತ್ತಿ ಕೊಡೋ' ಎಂದರು. ಮಗನ ಮನ ಒಪ್ಪಲಿಲ್ಲ ಚಳಿಯಲ್ಲಿ ನಡುಗುವವರಿಗೆ ತೂತಿನ ಬಟ್ಟೆಯೆ, ಎಂದು ಮೂಗಿನ ಮೇಲೆ ಬೆರಳಿಟ್ಟ. ತನ್ನ ಒಂದು ಹಳೇ ಷರ್ಟನ್ನೂ ಜೊತೆಗಿರಿಸಿ, ಮನೆ ಡ್ರೈವರನ್ನು ಕರೆದು, 'ನಾಳೆ ಇವನ್ನು ಈ ಊರಿನ ನಿರಾಶ್ರಿತ ಸಹಾಯ ಸಂಘದ ಕಚೇರಿಗೆ ತಲಪಿಸು' ಎಂದ. ಡ್ರೈವರನಿಗೆ ಆಶ್ಚರ್ಯವಾಯಿತು. ಮನೆ ಮಠ ತೊರೆದು ಉಪ್ಪರಿಗೆ ಕೊಪ್ಪರಿಗೆ ಕಳೆದು ಬಂದಿರುವ ಅಣ್ಣ ತಮ್ಮಂದಿರಿಗೆ ಹಳೆಯ ಚಿಂದಿ ದಾನವೆ, ಎಂದು ತಲೆ ಚಚ್ಚಿದ. ಹರಕಲಲ್ಲದ ತನ್ನದೊಂದು, ಬಿನ್ನಿ ಬಟ್ಟೆ ಕೋಟನ್ನೂ ಜೊತೆಗೆ ಕಟ್ಟಿದ. ಮಾದಾ ಎಂದು ತೋಟದ ಮಾಲಿಯನ್ನು ಕರೆದು, ನಾಳೆ ಎಂಬುದು ಇಂದೇ ಆಗಲಿ ! ಈಗಲೇ ನೀನಿದನ್ನು ಕಚೇರಿಗೆ ಕೊಟ್ಟುಬಾ, ಚಳಿಯಲ್ಲಿ ರಕ್ತ ಹೆಪ್ಪುಕಟ್ಟೀತು, ಎಂದ. ಮಾದ ಇನ್ನೂ ಹರೆಯದ ಹುಡುಗ ಮೊನ್ನೆ ತಾನೆ ಮದುವೆಯಾಗಿತ್ತು. ಮಾವ ಕೊಟ್ಟ ಹೊಸ ಉಲ್ಲನ್ ಕೋಟನ್ನು ನಾನು ತೊಟ್ಟು ಮೆರೆಯುವುದನ್ಯಾಯ ; ನನ್ನ ಪಾಡು. ಹೇಗೋ ಆಗುತ್ತೆ. ಹತ್ತಿಯಿಂದ ಶೀತ ನಿಲ್ಲದು, ಎನ್ನುತ್ತ, ಆತ ತನ್ನ ಲಾಲಿಂಲಿ ಕೋಟನ್ನೂ ಕೊಟ್ಟ., ಧನ್ಯ.

—o—



ಈಶ್ವರನ ಗುಡಿ ಎಲ್ಲಪ್ಪಾ ?

ಇದೇ ರಸ್ತೇಲಿ ಹೋಗೀಮ್ಮಾ. ಆ ಕಸಾಯಿ ಅಂಗಡಿ ಇದೆಯಲ್ಲಾ ಅದರ ಪಕ್ಕದಲ್ಲೇ ದೇವಸ್ಥಾನಮ್ಮಾ !

ಜಂಪರ್ - ಕಪ್ಪೆ

ಕಲ್ಯಾಣ ನಗರವಾದ ಬೆಂಗಳೂರಲ್ಲಿ ವರ್ಷ ವರ್ಷ ನಡೆಯುತ್ತಿರುವ ಕುದುರೆ ಜೂಜುಗಳ ವ್ಯವಸ್ಥಾಪಕರನ್ನು, ನಾಗರಿಕರೂ ನೆರೆಹೊರೆ ಪ್ರಾಂತದ ಅಶ್ವಪ್ರೇಮಿಗಳೂ ಗಂಟು ಬೇಟೆಗಾರರೂ ಸ್ಥಳದ ಹೋಟೆಲ್ ಮಾಲೀಕರೂ ಹೋರಾರತ್ನರೂ ಎಷ್ಟು ವಂದಿಸಿದರೂ ಸಾಲದು. ಕುದುರೆ ಜೂಜುಗಳಿಂದ ಕುದುರೆಗಳ ಥಳಿ ಉತ್ತಮವಾಗುತ್ತದೆ ಇದರಿಂದ ದೇಶೋದ್ಧಾರವಾಗುವುದೆಂಬ ವಾದವನ್ನು ನಾವು ಒಪ್ಪಲಾರೆವು. ಜೂಜು ಕುದುರೆಗಳನ್ನು ಗಾಡಿಗೆ ಕಟ್ಟುವಂತಿಲ್ಲ, ಶೇಕ್‌ದಾರರು ಹತ್ತುವಂತಿಲ್ಲ; ರಿಸರ್ವ್ ಪೋಲೀಸರು ದೊಂಬಿಯ ಕಡೆ ನೂಕುವ ಹಾಗಿಲ್ಲ; ಯುದ್ಧಕ್ಕೆ ಅವು ತೀರ ಅಪ್ರಯೋಜಕ. ಅವು ದೇವಲೋಕದ ಉಚ್ಚೈಶ್ರವಸ್ಸುಗಳು. ಭೂಲೋಕದ ಹುಲ್ಲು ಹುರಳಿಗಳು ಅವಕ್ಕೆ ಕೇವಲ ಕಸ ಅವುಗಳಿಗೆ ಮುಖವಾಡ ತೊಡಿಸಿ ಕುಪ್ಪಸ ಹೊಲೆದು ನಾಮಕರಣ ಮಾಡಿ ವೈತಿಕ್ಕೆ ಬಾಲ ಕುಯ್ದು ವಿಮಾನಗಳಲ್ಲಿ ಸಾಗಿಸಿ ಸೋಮಪಾನ ಮಾಡಿಸಿ ವಂಶಾವಳಿ ಶ್ರವಣ ಮಾಡಿಸಿ ರೇಸ್ ಬಿಡುತ್ತಾರೆ. ಜೂಜು ಮನೋಭಾವಕ್ಕೆ ಗುಲಾಮರಾದ ಶ್ರೀಮಂತರೂ ಬಡವರೂ ಅವುಗಳ ಬೆನ್ನಮೇಲೆ ಕಾಲಿಟ್ಟು ಕುಚೇಲ ಕುಬೇರರಾಗುತ್ತಾರೆ.

ಇಂತಹ ಜೂಜು ಬಾಜಿಗಳನ್ನು ಪ್ರೋತ್ಸಾಹಿಸುವುದು ನ್ಯಾಯ, ನಾಗರಿಕತನ, ಪ್ರಗತಿಯ ಲಕ್ಷಣ ಎಂದು ತಿಳಿದುಕೊಂಡಿರುವ ಇಂಗ್ಲಿಷರು ಕೇವಲ ಜನಸಾಮಾನ್ಯಕ್ಕೋಸ್ಕರ 'ನಾಯಿರೇಸು'ಗಳನ್ನೇರ್ಪಡಿಸಿದಾರೆ. ಯಾವ ಪ್ರಾಣಿ ಓಡಿದರೇನು, ಜೂಜುತಾನೆ ಮುಖ್ಯವಾದ ಸ್ವಾರಸ್ಯ, ಬಲವಾದ ಆಕರ್ಷಣೆ? ಈಗ ನಾವು ಬೆಂಗಳೂರು ಮುಂತಾದ ಮಾದರಿ ನಗರಗಳಲ್ಲಿ ಕಾಣುವ ಕುದುರೆ ಜೂಜು ಶಾಸ್ತ್ರವೆಲ್ಲವನ್ನೂ ಈ ನಾಯಿ ಜೂಜಿಗೂ ಇಂಗ್ಲೀಷರು ಅನ್ವಯಿಸುತ್ತಾರೆ. ಬುಕ್ಕೀ, ಟೋಟ್, ಟ್ರಿಪ್ಲ್ ಇವೆಂಟ್, ಕುಲ, ಗೋತ್ರ, ಡಿವಿಡೆಂಡ್. ಮೊದಲನೆಯ ಎನ್‌ಕ್ಲೋಷರ್ ಎರಡನೆಯ ಎನ್‌ಕ್ಲೋಷರ್ ...ಸಮಸ್ತ ವೈಭವವೂ ನಾಯಿಗಳಿಗೂ ಉಂಟು.

ಗಲ್ಲಿ ಗಲ್ಲಿಯಲ್ಲೂ ನಾಯಿಗಳು ಪಂದ್ಯಮಾಡುವ ನಮ್ಮೂರಲ್ಲಿ ಡಾಗ್‌ರೇಸ್' ಅಷ್ಟು ಜನಪ್ರಿಯವಾಗಲಾರದು. ಆದ್ದರಿಂದ, ನವನಾಗರಿಕದ ಗೌರಿಶಂಕರದ ಮೇಲೆ ಓಲೈಸುತ್ತಿರುವ ಯು. ಎಸ್. ಎ. (ಅರ್ಥಾತ್, ಅಮೇರಿಕಾ)ದಿಂದ, ನಾವು ಏಕೆ ಮತ್ತೊಂದು ಜೂಜಿನ ಪಂದ್ಯವನ್ನು ಆಮದುಮಾಡಬಾರದು? ಭರತಖಂಡದ ಎಲ್ಲ ಪ್ರಾಂತಗಳಿಗಿಂತಲೂ ಮುಂಚೆಯೇ ನಾವು, ಕೆಳತುಳಿಯಲ್ಪಟ್ಟ

ಕನ್ನಡಿಗರಾದ ನಾವು, ಅದನ್ನು ಜಾರಿಗೆ ತಂದರೆ, ನಮ್ಮ ಕೀರ್ತಿ ವಿಹಾರ ಪ್ರಪಂಚದಲ್ಲಿ ಎಂದೆಂದೂ ಅಳಿಯದೆ ವಿರಾಜಿಸುವುದು.

ಅಮೇರಿಕಾದಲ್ಲಿ ಜಂಪರ್-ಕಪ್ಪೆ ಪಂದ್ಯ ಜನಾದರಣೀಯವಾಗಿದೆ. ಪ್ರತಿಯೊಂದು ಮುಖ್ಯ ನಗರದಲ್ಲೂ ವರ್ಷಕ್ಕೊಂದೆರಡು ಬಾರಿ ಇದು ನಡೆಯುತ್ತದೆ. ಹೀಲಿಯೊಟ್ರೋಪ್ ಎಂಬ ಪ್ರಖ್ಯಾತ ಜೂಜು ಕಪ್ಪೆ ಒಂದು ಮೊನ್ನೆ ಸಾನ್ ಫ್ರಾನ್‌ಸಿಸ್ಕೊದಲ್ಲಿ ಒಂದೇ ಹಾರಿಗೆ ೧೭॥ ಅಡಿ ಕುಪ್ಪಳಿಸಿ, ೪೦೦೦ ಡಾಲರ್ ಬಹುಮಾನವನ್ನೂ ಒಂದು ಚಿನ್ನದ ಬಾತ್‌ಟಬ್‌ನ್ನೂ ಗಳಿಸಿತಂತೆ. ನೂರಾರು ಚಾಂಪಿಯನ್ ಕಪ್ಪೆಗಳು ಪ್ರತಿಸ್ಪರ್ಧಿಸಿದುವೆಂದೂ, ಬಾಜಿಕಟ್ಟಿ ಜನ ಕಳೆದು ಗಳಿಸಿ ಕೈಬದಲಾಯಿಸಿದ ಹಣ ಸುಮಾರು ೧೦ ಲಕ್ಷ ಡಾಲರುಗಳನ್ನು ಮೀರಿದುವೆಂದೂ ಪತ್ರಿಕೆಗಳು ಪ್ರಕಟಿಸಿವೆ. ಅಮೇರಿಕದ ಕಾಲೇಜು ವಿದ್ಯಾರ್ಥಿ ವೃಂದ ಹಾಗೂ ರಾಜಕೀಯನಾಯಕರೂ ಈ ಕಪ್ಪೆಗಳ ಪೋಷಕರಾಗಿ ಪ್ರೇರಕರಾಗಿ ಪಂದ್ಯ ಕಾಲದಲ್ಲಿ ಕೂಗಾಟವೆಬ್ಬಿಸಿ ಹುರಿದುಂಬಿಸಿದರಂತೆ.

ಇಂಗ್ಲಂಡಿನ ಕುದುರೆ ಪಂದ್ಯ ಪ್ರಪಂಚದಲ್ಲಿ ವಿಖ್ಯಾತರಾಗಿರುವ ಹಲವಾರು ರಾಜಮಹಾರಾಜರುಗಳ, ಹೈಕಮಿಷನರುಗಳ ದೃಷ್ಟಿ ಈಗ, ಅಮೇರಿಕದ ಕಪ್ಪೆಗಳ ಮೇಲೆ ಬಿದ್ದಿವೆಯಂತೆ.

ಕುದುರೆ ಜೂಜುಗಾರರು ಈ ಹೊಸ ಪಂದ್ಯಕ್ಕೆ ತಿರುಗಿದರೆ, ಇನ್ನೇನಿಲ್ಲದಿದ್ದರೂ, ನಮ್ಮ ದೇಶದ ಆಹಾರಪರಿಸ್ಥಿತಿ ಮತ್ತು ಸಂಚಾರ ಸೌಕರ್ಯಗಳ ಸ್ಥಿತಿ ಉತ್ತಮಗೊಳ್ಳುತ್ತದೆ. ಅಷ್ಟಕ್ಕಾಗಿಯಾದರೂ, ಅವರು ಆ ಉಪಕಾರ ಮಾಡುವರೆ ?

—ರೇವಣ್ಣ.

ಉಣ್ಣೆ ಕೆಚ್ಚಲೊಳಿದ್ದು ಉಣಲರಿಯದಮೃತವನು !
ಪುಣ್ಯಕ್ಕೆ ಲಂಚ ಲಭಿಸಿದೊಡೆ, ತಣ್ಣಗದ
ನುಣ್ಣದವರುಂಟೆ ? ಸರ್ವಜ್ಞ

* * * *

ಇಕ್ಕಿದಾತನು ಸೊಕ್ಕಿ ನಕ್ಕು ತಪ್ಪಿಸಿಕೊಂಡ,
ಇಕ್ಕಿದ್ದ ತಿಂದ ಪುಳಿಚಾರು, ಸೇಪರಿಗೆ
ಬಿಕ್ಕುತ್ತ ಬರೆದ ಸರ್ವಜ್ಞ.

ಮಂತ್ರಿಯಾಯಿತು ಆನೆ

ಒಂದು ಅರಣ್ಯ, ಅಲ್ಲೊಂದಾನೆ
ಸಿಂಹ ಒಂದುಸಲ ಸ್ವಯಂ ತಾನೆ
ಹೇಳಿ ಕಳಿಸಿತು : " ಹೇ ಗಜವರ್ಯ !
ನಮ್ಮರಮನೆಯಲಿ ಮಂತ್ರಿಯ ಕಾರ್ಯ
ನಿನಗೇ ಕಾದಿದೆ ಇದನೀ ಕೈಕೋ ! "
ಆನೆ ಬಿಡುವುದೆ ? ಒಪ್ಪಿತು—' ಓಹೋ ! '


ಕಾಡೊಳು ಸುದ್ದಿ ಹರಡಿತು—ಆನೆ ಮಂತ್ರಿಯಾಯಿತೆಂದು
ಕೇಳಿದ ಕೂಡಲೆ ಮಿಕ್ಕ ಮೃಗಗಳು ಹೊಟ್ಟೆಯುರಿಗೆ ಬೆಂದು
ಬೆಟ್ಟದ ತುದಿಯಲಿ ಸಭೆಯು ಕರೆದು ನೆರೆದು
ಆನೆಯ ಸುದ್ದಿಯ ಹಿಡಿದು ಹಿಸುಕಿ ಹರಿದು—
ಕರಡಿ ಹೇಳಿತು .
' ಕರಿಯ ಬಣ್ಣ ಕರಿಕೂದಲು ಬೇಕೇ ಮಂತ್ರಿಯಾಗುವನಿಗೆ—
ನನ್ನ ಬಿಟ್ಟು ಈ ಆನೆಯಾಯ್ತು....ಘೋರಾಪಮಾನ ನನಗೆ ! '
ಬಾಲ ಬಿಚ್ಚಿ ಬಿಡುಬೀಸಿ ಹೇಳಿತು ಕೋತಿ—' ನನ್ನ ಜೊತೆಗೆ
ಉದ್ದಮೂಗಿನೀ ಆನೆ ನಿಲುವುದೆ !
ಏನು ಬಂತೊ ನಾ ಕಾಣೆ ನಮ್ಮ ಮೃಗರಾಜನವನ ಮತಿಗೆ ! '
ನೆಗೆಯಿತಾ ನರಿ ತೋಕೆ ತೂಗುತ....' ಇದುವೆ ನನ್ನ ಸವ್ವಾಲು !
ಅತ್ತ ಕರಟಕ ! ಇತ್ತ ದಮನಕ !
ಇಂಥ ವಂಶದಲಿ ಹುಟ್ಟಿದವರದೇ ಮಂತ್ರಿತನದ ಮಾಲು ! '
' ಪಟ್ಟೆಯಿರುವುದೇ ಆನೆ 'ಗೆಂದಿತು ಹುಲಿಯು ಗರ್ಜಿಸುತ್ತ !
ಹಾವು ಭುಸುಗಿತು—' ಆನೆಗಿರುವುದೇ ನನ್ನ ಹಾಗೆ ಹುತ್ತ ? '
ಮೃಗದ ಜಾತಿ ತಾನಲ್ಲದುದನು ಮರೆತಂತೆ ರೆಕ್ಕೆ ಬಡಿದು
ಹದ್ದು ಗೊರಗಿತು— ಮಂತ್ರಿಪದವಿಗೆ

'ಎಲ್ಲಿ ತಂದರೋ ಹಾರಲಾರದೀ ಆನೆಮೃಗವ ಹಿಡಿದು !'
ಮೆಲ್ಲನೆದ್ದಿತು ಗುಟುರು ಹಾಕುತ ಮಲೆಯ ಮೈಯ ಗೂಳಿ :
'ಸದ್ದು !' ಎಂದಿತು ; 'ಇದರ ಗುಟ್ಟು ನಾ ಹೇಳುತೇನೆ, ಕೇಳಿ
ಕೊಂಬು ನೋಡಿ ಈ ಆನೆಗಿತ್ತರು ಮಂತ್ರಿಪದವಿಯನ್ನ
ಕೊಂಬಿನಿಂದಲೆ ಆನೆಗಾಯಿತು ನನ್ನ ಪಾಲಿನನ್ನ'
ಅಲ್ಲೆ ಪಕ್ಕದಲೆ ಕಾಲು ಚಾಚಿದ ಉದ್ದಕಿವಿಯ ಕತ್ತೆ
ಕಿವಿಯ ಪಟಪಟನೆ ಬಡಿದು ಹೇಳಿತು : 'ಸತ್ಯ ಏನು ಗೊತ್ತೆ ?
ನನಗೆ ಉದ್ದಕಿವಿ ! ಆನೆಗಗಲ ಕಿವಿ ! ಇಷ್ಟೇ ನೋಡಿ ವ್ಯತ್ಯಾಸ !
ಕಿವಿಯನರಿಯದೀ ಸಿಂಹರಾಜ್ಯದಲಿ ಆಯ್ತು ನನಗೆ ಮೋಸ ?'

* * * *

ಇಂತು ನಡೆಯಿತು ಕಾಡಿನಲಿ ಸಭೆ
ನಡೆಯಿತಾನೆಯ ಖಂಡನಾ
ಖಂಡಿಸುವ ನೆಪದಲ್ಲೆ ನಡೆಯಿತು
ಸ್ವಪ್ರತಿಷ್ಠೆಯ ಮಂಡನಾ.

(ಕ್ರೈಲಾಫ್ ಎಂಬ ರಷ್ಯನ್ ಕವಿಯನ್ನು ಆಧರಿಸಿ)



ಬುದ್ಧಿವಂತನ ಸಲಹೆ

"ಗುಮಾಸ್ತೆಯರು ಹೆಚ್ಚಿದಷ್ಟು ಗೊಂದಲ ಹೆಚ್ಚು! ಗುಜಗುಜ ಜಾಸ್ತಿ. ತಕ್ಷಣವೇ ಆದಷ್ಟು ಮಂದಿ ಅನವಶ್ಯಕರನ್ನು ಆಚೆಗೋಡಿಸಿ" ಎಂಬ ಹುಕುಂ ಬಂತು. ಬೋರೇಗೌಡನ ಬೆನ್ನಿಗೆ ಭಾರ ಕಡಮೆಯಾಗುವ ಸುಮುಹೂರ್ತ ಸಮೀಪಿಸಿತು. ಓ ಎಂದಾಗ ಠೋ ಎಂಬಂತೆ ಹುಕುಂ ಹಿಂದೆಯೇ ಒಂದು ಸಮಿತಿಯೂ ರಚನೆ ಆಯಿತು.

ಸಮಿತಿಯ ಸದಸ್ಯ ಅಧ್ಯಕ್ಷ ಕಾರ್ಯದರ್ಶಿ ಸ್ವಕಾರ್ಯದರ್ಶಿ ತೀರ್ಮಾನ ವಾಗಲು ೬ ತಿಂಗಳು ಹಿಡಿಯಿತು; ಸಮಿತಿಗೆ ಟೈಪಿಸ್ಟು, ಟೈಪ್ ರೈಟರು ಡೂಪ್ಲಿ ಕೇಟರು, ಅಕೌಂಟೆಂಟರು, ಇಂದಾ ಗೆ, ಶೀಘ್ರ ಲಿಪಿಗಾರ, ವ್ಯಾಘ್ರ ಲಿಪಿಗಾರ, ಜವಾನ ಜವಾನಿ ಕಚೇರಿ ಕುರ್ಚಿ ಮೇಜು ಬೀಸಣಿಗೆ ಹೂಜಿ ಕಾಗದ ಶಾಯಿ ಕಡ್ಡಿ ಕಸದಬುಟ್ಟಿ ಇತ್ಯಾದಿ ಸ್ಯಾಂಕ್ಷನ್ ಆಗಲು ೬ ತಿಂಗಳು; ಸಪ್ಲೈ ಆಗಲು ಎಂಟು ....ನಿಧಾನವಾಯಿತು.

ತದನಂತರ ಎರಡು ತಿಂಗಳ ಅಲ್ಪಕಾಲಾವಧಿಯಲ್ಲೇ ಮೊದಲನೆಯ ಅಧಿ ವೇಶನ ನಡೆಯಿತು. ಸರ್ಕಾರಿ ಕೆಲಸ ಕಾರ್ಯಗಳು ಪತ್ರವ್ಯವಹಾರಗಳು ಇತ್ತೀ ಚೆಗೆ (ಅಂದರೆ, ಎತ್ತೀಚೆಗೆ ಎಂಬುದನ್ನು ಸಮಿತಿಯೇ ತೀರ್ಮಾನಿಸಬೇಕಾಯಿತು) ಎಷ್ಟು ಹೆಚ್ಚಿದೆ, ಹೇಗೆ ಹೆಚ್ಚಿತು, ಅಷ್ಟು ಹೆಚ್ಚಲೇಬೇಕೆ, ಇತರ ಪ್ರಾಂತಗಳಲ್ಲಿ ಪರಿಸ್ಥಿತಿ ಹೇಗಿದೆ, ಪರರಾಷ್ಟ್ರಗಳಲ್ಲಿ ಪರಿಹಾರವೇನು ಮಾಡಿದಾರೆ, ಕಡಮೆಮಾಡಲು ಸಾಧ್ಯವೆ, ಸಾಧ್ಯವಿದ್ದರೆ ಹೇಗೆ ಎಂತು ಎಷ್ಟು ಎತ್ತ, ಹಾಗೆ ಕಡಮೆಮಾಡಿದರೆ, ಯಾವ ತತ್ವದ ಆಧಾರದಮೇಲೆ ಸಿಬ್ಬಂದಿಯನ್ನು ಮನೆಗೆ ಕಳುಹಿಸುವುದು, ಅವರು ಇದುವರೆಗೂ ಗಳಿಸಿರುವ ಗಂಟಿನ ಪರಿಮಾಣದ ಮೇಲೆಯೆ, ಅವರ ಜಾತಿ ಉಪ ಜಾತಿಗಳ ಮೇಲೆಯೆ, ಅವರ ನಂಟರಿಷ್ಟರ ಗಾತ್ರದ ಮೇಲೆಯೆ, ಸೀನಿಯಾರಿಟಿ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆ — ಎಂಬ ಪ್ರಶ್ನೆಗಳೆದ್ದುವು; ಪಟ್ಟಾಗಿ ಕೂತುವು. ಅಲ್ಲಾಡಲೇ ಇಲ್ಲ.

ಕಡೆಗೆ, ತಿಳುವಳಿಕಸ್ಥ ಸದಸ್ಯರೊಬ್ಬರು ಸಲಹೆ ಇತ್ತರು: ಮುಂದಿನ, ನಡ ವಳಿಕೆ ಹೇಗಾದರೂ ಇರಲಿ, ಮೊತ್ತಮೊದಲನೆಯದಾಗಿ, ಪ್ರತಿ ಕಚೇರಿಗೂ ಬರೆದು ಅಂಕಿ ಅಂಶಗಳನ್ನು ತರಿಸಿಕೊಳ್ಳೋಣ. ೧೯೩೯ ರಿಂದ ತಹಲ್‌ವರೆಗೂ ದಿನ ದಿನಕ್ಕೂ ನಿಮ್ಮ ಕಚೇರಿಗೆ ಬಂದ, ನಿಂತ, ಅಲ್ಲಿಂದ ಹೋದ ಪತ್ರ ಫಾರಮು ವಗೈರೆ ಎಷ್ಟು, ಪಟ್ಟಿಮಾಡಿ ಕಳುಹಿಸಿ, ಎಂಬ ಆಜ್ಞೆ ಎಲ್ಲ ಕಚೇರಿಗಳಿಗೂ ಹೋಯಿತು.

ಸದರಿ ಪಟ್ಟಿಗಳನ್ನು ತಯಾರುಮಾಡಲು ಪ್ರತಿ ಕಚೇರಿಗೂ ೩ ವಿಶೇಷ ಗುಮಾಸ್ತೆಯರನ್ನು ಕೇವಲ ಒಂದು ವರ್ಷದೊಳಗೆ ನೇಮಕಮಾಡಲಾಯಿತು. ಅವರೆಲ್ಲಾ ಹೊಸ ಪ್ರಾಯದ ಹೊಳಪು ತುಂಬಿದ ಹಸುಳೆಯರು, ಅವರಿಂದ ಅಂಕಿ ಅಂಶಗಳನ್ನು ಕೂಡಿಸಿ ಕಳುಹಿಸಲು ಎರಡು ಸಂವತ್ಸರಗಳಾದರೂ ಬೇಕಾದೀತು, ಎಂದು ಅಧಿಕಾರಿಗಳು ಬರೆದದ್ದನ್ನು ಮೂರು ನಾಲ್ಕು ಬಾರಿ ಕೇಂದ್ರ ಸಮಿತಿ ಚರ್ಚಿಸಿ, ಎಂಟೇ ತಿಂಗಳಲ್ಲಿ ಒದಗಿಸತಕ್ಕದ್ದೆಂದು ಒತ್ತಾಯಮಾಡಲಾಯಿತು. ಅದಕ್ಕೆ, ಅವರು 'ಸಾಧ್ಯವಿಲ್ಲ', ಇವರು, 'ಸಾಧ್ಯವಾಗಬೇಕು', ಅವರು, 'ಆತುರದ ಕೆಲಸ, ಅರ್ಧಂಬರ್ಧಂ ಆಗುತ್ತೆ', ಇವರು, 'ಹಾಗಾಗ ಕೂಡದು ; ಪೂರ್ಣಂ ಬರ್ದಂ ಆಗಲೇಬೇಕು'—ಎಂದು ಮುಂತಾಗಿ ಬರೆದು ಬೈದಾಡಿದರು.

ಕಡೆಗೆ, ಯಥಾಪ್ರಕಾರ, ಪುಸ್ತುಕ ತಿಳಿವಳಿಕಸ್ಥ ಸದಸ್ಯ ತಮ್ಮ ಅಮೂಲ್ಯ ಸಲಹೆ ಮತ್ತೊಂದನ್ನಿತ್ತ. ಎಂಟೇ ಎಂಟು ತಿಂಗಳಲ್ಲಿ ತಪಸೀಲುಗಳನ್ನು ತಯಾರಿಸಲು ಸಾಧ್ಯವೋ ಅಸಾಧ್ಯವೋ ಎಂಬ ಅಂಶವನ್ನು ಪರೀಕ್ಷಾರ್ಥವಾಗಿ ೩೨ ಕಚೇರಿಗಳಲ್ಲಿ ನಡೆಯಿಸುವುದು ಎಂದು. ಎಲ್ಲರೂ ಈ ಸಲಹೆಗೆ ೧೫ ನಿಮಿಷಗಳ ಕಾಲ ಚಪ್ಪಾಳೆ ತಟ್ಟಿದರು ; ೧೫ ದಿನಗಳವರೆಗೆ ಪುಸ್ತುಕ ಮೇಧಾವಿಗೆ ಚಹೋಪಹಾರಗಳೂ, ಧೂಪಾರತಿಗಳೂ ಜರುಗಿದುವು.

ಆದರೆ, ಇದಾದ ೨ ತಿಂಗಳಲ್ಲಿ ಮತ್ತೊಂದು ಬಿಕ್ಕಟ್ಟು ಬಿಗಡಾಯಿಸಿಕೊಂಡಿತು. ಯಾವ ೩೨ ಕಚೇರಿಗಳಲ್ಲಿ ಈ ಪರೀಕ್ಷೆಯನ್ನು ನಡೆಯಿಸುವುದು, ಎಂದು ನಿಶ್ಚಯಿಸಲು ಏರ್ಪಾಟಾದ ಉಪಸಮಿತಿಗಳೆರಡೂ ಹೊಡೆದಾಟದಲ್ಲೇ ಚದುರಿದುವು. ಸಮಿತಿಯ ಸದಸ್ಯರುಗಳ ಅಳಿಯಗಳೆಯಂದಿರು ನೌಕರಿ ನೋಡುತ್ತಿರುವ ಯಾವ ಕಚೇರಿಯನ್ನೂ ಆರಿಸಕೂಡದೆಂಬುದು ಅವರ ವಾದ. ಆ ಕಚೇರಿ ದೂರ, ಇದು ಹತ್ತಿರ, ಅದು ಮುಖ್ಯ ಇದು ಅಮುಖ್ಯ, ಅಲ್ಲಿ ನಮ್ಮವನಿದಾನೆ ಇಲ್ಲಿ ನಿಮ್ಮವನಿದಾನೆ ಎಂಬುದೇ ಸಬೂಬು.

ಕಡೆಗೆ, ತಿಳುವಳಿಕಸ್ಥನ ಮೂರನೇ ಸಲಹೆ ಹೊರಬಂತು. "ನೀವೆಲ್ಲ ಕೊಂಚ ಶಾಂತರಾಗಿರಿ, ಇದೇ ರೀತಿಯ ಬಿಕ್ಕಟ್ಟುಗಳನ್ನು ಅಮೇರಿಕಾದಲ್ಲಿ ಹೇಗೆ ಬಿಡಿಸುತ್ತಾರೆಂಬುದನ್ನು ನಾನು, ಅಲ್ಲಿಗೆ ಹೋಗಿ, ಕೂಲಂಕಷವಾಗಿ ಅರಿತು ಬರುತ್ತೇನೆ" ಎಂದರು. ಹಣ ಸಾಂಕ್ಷನಾಗಲು ಆರು ತಿಂಗಳು ; ವಿಮಾನದಲ್ಲಿ ಪೀಠ ದೊರೆಯಲು ೩ ; ಆದಷ್ಟು ಬೇಗ ಹಿಂತಿರುಗುತ್ತೇನೆ ಎಂದು ಹೇಳುತ್ತ, ಮೊನ್ನೆ ಅವರು ಕೈಬೀಸಿದರು.


—ಕಾಮತ್.

ಯುಗ ಯುಗದ ಮಾತು

ಉಬ್ಬಿತು, ಉಕ್ಕಿತು, ರೈತರ ಸಂತಸ
ಶಹಬಾಸೆಂದರು ಜನರೆಲ್ಲ!
ಗೌಡರು ನಾಯಕ ಕುರಿತಿಂತೆಂದರು :
ನೆರೆದವರೆಲ್ಲಾ ಕೇಳಿದರು.
" ಬೇಕಾದುದ ನಾ ಕೊಡುವೆನು, ಸ್ವಾಮಿ!
ನೂರೇಕಿನ್ನೂ ಸಾವಿರ ಕೊಡುವೆನು
ಬೇಕಾದುದನೆಲ್ಲವ ನೀ ಕೇಳು
ಊರೇ ನಿನ್ನದು, ನಾ ನಿನ್ನಾಳು
ಆದರೆ, ಒಂದೇ ಸಂದೇಹ!
ಹೆಗ್ಗಣನಾಶಕ ಶಕ್ತಿಯು ನಿನಗೆ
ನಿಜವಾಗಿರುವುದು ಸರಿಯಷ್ಟೆ ? "
ನಾಯಕ ಹಿಂತಿರುಗೆಲ್ಲರ ನೋಡಿ
ಕೈಯಾ ಗಡಿಯಾರದಲಿ ನೋಡಿ
ಗಂಟಲನೀವುತ ದುರುದುರು ಮಾಡಿ
ಗೌಡರ ಕಡೆ ತಿರುಗಿಂತೆಂದ
" ಕೃತಯುಗದೊಳು ಕೈಲಾಸದೊಳು
ಹೆಗ್ಗಣ ಹಾವಳಿ ಮಿತಿಮೀರೆ
ನಾವೇ ನಿಮಿಷದಿ ಶಾಪದಿ ಕೋಪದಿ .. ....
ದ್ವಾಪರ ಯುಗದೊಳು ವೈಕುಂಠದೊಳು
ಹೆಗ್ಗಣ ಸೈನ್ಯವು ಅಗ್ಗದ ಬಟ್ಟೆಗೆ

ಗಗನದಮೇಲಕೆ ಬೆಲೆ ಏರಿಸಲು........
“ ಮಾತಿನ ಕೋಟೆಯ ನುರುಳಿಸು, ನಾಯಕ
ನೀ ಗಟ್ಟಿಗನೆಂಬುದು ಗೊತ್ತಾಯ್ತು
ನಿನ್ನ ಪರಾಕ್ರಮಕೆ ಅಂತ್ಯವೆ ಇಲ್ಲ !
ನಮ್ಮಾ ಹೆಗ್ಗಣ ಹಿಂಡುಗಳೆಲ್ಲ
ನಿನ್ನೀ ಮಾತಿಗೆ ಸೋಲುವವೆ ?
ಸದೆ ಬಡಿದವುಗಳ ಸಂಹರಿಸೆ
ವಿಧ ವಿಧ ಭಾಷಣ ಸಾಲುವವೆ ?
ಕೃತಯುಗ ದ್ವಾಪರಯುಗವಿದು ಅಲ್ಲ
ಕಲಿಯುಗವೆಂಬುದು ಮರೆತಿಹೆಯ ! ”
ಎಂದನು ಗೌಡನು ತಲೆ ಕೆರೆದು
ಜನತತಿ ನಿಂತಿತು ಬಿಸಿಲಲ್ಲೇ

—— o ——



ಸರ್ಕಾರ
ಸಾವಧಾನ
ಕಾಲ ಚಕ್ರ

ಕಿಷ್ಣ ರಾಜ್ಯ

ಈರ : ಬೀರಣ್ಣ ! ನಿನ್ನೊಂದು ಮಾತ್ ಕೇಳ್ತೀನಿ... ಕಿಷ್ಣಾವತಾರದ ಕಾಲ್ದಾಗೆ ಸರ್ಕಾರ ಗಿರ್ಕಾರ ಅಷ್ಟು ಪಸಂದಾಗಿರಲಿಲ್ವಾ ?

ಬೀರ : ಇದ್ಯಾಕಪ್ಪ ಹಿಂಗೋಡ್ತತೆ ನಿನ್ಬುದ್ಧಿ ?

ಈರ : ನಿನ್ನೆ ಹರ್ಕಥೆದಾಸ್ರು ಸುಧಾಮನ್ ಕತೆ ಹೇಳ್ಲಿಲ್ವಾ ? ಸುಧಾಮಂಗೆ ೨೮ ಹೈಕಳು; ಒಂದೊಂದಕ್ಕೂವೇ ನಕ್ಷತ್ರದ್ದೈಸರಿಟ್ ಕರೀತಿದ್ದ ಅವಯ್ಯ ಅಂತ; ಆಗಿನ ಕಾಲ್ದಾಗೆ ಓಟು ಗೀಟು ಅಂತ ಇದ್ದಿದ್ರೆ, ಅವಯ್ಯ ನೆಟ್ಗೆ ಕಿಷ್ಣನ್ ತಾನ್ಕೇನೆ ಹೋಗ್ಬೇಕಿತ್ತಾ ? ಒಬ್ಬ ಮಂತ್ರಿಗಿಂತ್ರಿ ನೋಡಿ, ನೋಡಪ್ಪ, ನಮ್ಮನೆಯಾಗಿನ ಓಟೆಲ್ಲ ನಿನ್ನೆಸರಿಗೇ ಗಾರಂಟಿ ಮಡಗ್ತೀನೆ, ಹೊಟ್ಟೆಗೆ ಹಿಟ್ಟು ಬಟ್ಟೆಗೆ ದುಡ್ಡು ಜುಟ್ಟಿಗೊಂದೀಟು ಊವು ಕೊಡಿಸ್ಬುಡು ನನ್ನ ಜೀವ ಇರೋತನಕ, ಅಂತ ಅಂದಿದ್ರೆ, ರೈಟ್ ಅಂತಿದ್ದನೋ ಇಲ್ವೋ ?... ಆ ಅವಲಕ್ಕಿ ಪೊಟ್ಣಾನ ದೋರಕಾಪುರದ್ವರೆಗೂ ಅರ್ಮನೆ ತಾವ್ಕಾನೂ ಹೊತ್ಗೊಂಡು ಯಾಕೆ ಹೋಗ್ಬೇಕಿತ್ತು ? ಈಗಿನ ಕಾಲ ಆಗಿದ್ರೆ ಅಂಥಾದ್ನೆಲ್ಲ ಊರಾಗಿನಿಸಮುಗಳಿಗೇನೆ.

ಬೀರ : ಈರಣ್ಣಾ !

ಈರ : ಆ !

ಬೀರ : ಇದ್ಕೇ ನಿನ್ನ ಊರಿನೋರೆಲ್ಲ ಬೆಪ್ಪ ಅನ್ನೋದು. ಕಿಷ್ಣರಾಜ್ಯದಲ್ಲೆಲ್ಲಿ ಬಂತೋ ಇಂಥ ಸಲೀಸು ದಾರಿ ? ಅವೆಲ್ಲ, ರಾಮರಾಜ್ಯದಲ್ಲಿ . ....

—o—



ತಲೆ ಕಾಯಲಿ ಅಂತ ಗೂಡು ಕಟ್ಟಿದರೆ__ತಲೇನ ಕೆಡುವಂತಾಯ್ತು.

ಪಾತಾಳದಲ್ಲಿ ಪಾಪಯ್ಯ

(9. ಮೃಗ ವಿಶೇಷವೊಂದನ್ನು ಪಾಪಯ್ಯ ಪತ್ತೆ ಹಚ್ಚಿದ್ದು.)

"ಬೃಹಸ್ಪತಿ" ಟಾಕೀಸಿನಲ್ಲಿ "ಚಂದ್ರೋದಯ" ಎನ್ನುವ ಒಂದು ಅದ್ಭುತ ತಮಿಳು ಚಿತ್ರ ತೋರಿಸಲ್ಪಡುತ್ತಿತ್ತು ಇದರ ಜಾಹೀರಾತು ವಿಪರೀತವಾಗಿ ಬಿಟ್ಟು. ಎಲ್ಲೆಲ್ಲೂ ಆವಾತೇ ಆಗಿಹೋಗಿತ್ತು. ಆರು ಗಂಟೆಯ ಆಟಕ್ಕೆ ಸ್ಥಳ ಸಿಗಬೇಕಾದರೆ ಮೂರುಗಂಟೆಗೇ ಕ್ಯೂನಲ್ಲಿ ಹೋಗಿ ನಿಲ್ಲಬೇಕುಎನ್ನುವ ಸೂತ್ರವನ್ನು ಬಲ್ಲವರಿಂದ ಕಲ್ತು ನಾನು ಎರಡೂವರೆ ಗಂಟೆಗೇ ಹೋಗಿ ಹತ್ತಾಣೆ ಟಿಕೀಟಿನ ಕ್ಯೂವಿಗೆ ತಗಲಿಕೊಂಡೆ. ಆದರೆ ನಾನು ಆ ಮೆರವಣಿಗೆಯಲ್ಲಿ ಹತ್ತು ಹೆಜ್ಜೆ ಹಾರುವುದರೊಳಗೆ ಟಿಕೀಟು ಕಿಟಕಿಯ ಮುಂದೆ ಮನೆ ತುಂಬಿಸಿದ ಬೋರ್ಡು ಹಾಕಲ್ಪಟ್ಟು ಕೂಡಲೇ ಕ್ಯೂ ಚದರಿತು. ನಾನು ಪೆಚ್ಚುಮೋರೆ ಧರಿಸಿ ಸ್ವಲ್ಪ ಹೊತ್ತು ಅಲ್ಲೇ ಪೆಂಗಾಗಿ ನಿಂತಿದ್ದು ಆಮೇಲೆ ಪಕ್ಕದಲ್ಲೇ ಇದ್ದ 'ಬೃಹಸ್ಪತಿ' ಕೆಫೆಗೆ ನುಗ್ಗಿ ಒಣಗಿದ ಬಾಯಿಗೆ ಒಂದು ಲೋಟ ಕಾಫಿ ತರಿಸಿದೆ.

ಕಾಫಿ ಮುಗಿಯುವುದರೊಳಗಾಗಿ ನನ್ನ ಮಗ್ಗುಲ ಕುರ್ಚಿಯಲ್ಲಿ ಒಬ್ಬ ಆಜಾನುಬಾಹು ಬಂದು ಕೂತು ಬೆವರೊರಸಿಕೊಳ್ಳಲಾರಂಭಿಸಿದ. ನಾನು ಒಂದು ಕ್ಷಣ ಆ ಜಟ್ಟಿಯ ಮುಖ ನೋಡಿ ಮತ್ತೆ ಕಾಫಿಯ ಕಡೆ ಗಮನ ತಿರುಗಿಸಿದೆ. ಜಟ್ಟಿಯೂ ನನ್ನ ಮುಖಾರವಿಂದವನ್ನು ಸ್ವಲ್ಪಹೊತ್ತು ನೋಡಿ, ತನ್ನ ಸೊಂಟದಿಂದ ಒಂದು ಚಿಕ್ಕ ಸುರುಳಿಯನ್ನು ತೆಗೆದು ನನ್ನೆದುರಿಗೆ ಬಿಚ್ಚಿಟ್ಟು "ಬೇಕೋ?" ಅಂದ.

'ಬೃಹಸ್ಪತಿ' ಟಾಕೀಸಿನ ಹತ್ತಾಣೆ ಟಿಕೀಟು, ಆ ಸುರುಳಿ. ಅದೇ ಆಟಕ್ಕೆ ನಾನು ಅದನ್ನು ತೆಗೆದುಕೊಳ್ಳುವುದೇ ಬಿಡುವುದೇ ಎಂಬ ಯೋಚನೆಯಲ್ಲಿದ್ದಾಗ ಹತ್ತಿರದಲ್ಲೇ ಇದ್ದ ಇನ್ನೊಬ್ಬ ಆಶಾಭಂಗಿ ಕೈಚಾಚಿ ಆ ಟಿಕೀಟನ್ನು ಆತುಕೊಂಡು:

"ನನಗೆ ಕೊಡಿ ಸದ್ಯ!" ಅಂದ.

"ರೂಪಾಯಿ ಹನ್ನೆರಡಾಣೆ" ಅಂದ, ಜಟ್ಟಿ.

ಕುಡಿಯುತ್ತಿದ್ದ ಕಾಫಿಯನ್ನು ಹಾಗೇ ಬಿಟ್ಟು ಹಲ್ಲು ಕಿರಿಯುತ್ತ ಆ ಸಿನಿಮಾ ಪ್ರೇಮಿ ಟಿಕೀಟು ಪಡೆದು ಆಚೆನಡೆದ ಜಟ್ಟಿ ನನ್ನ ಕಡೆ ತಿರುಗಿ ಪರಿತಾಪದಿಂದ "ನಾನೇನ್ಮಾಡಲಿ ನೀವು ನಿಧಾನಮಾಡಿದಿರಿ ಅದೇ ಕಡೇ ಟಿಕೀಟು ನನ್ನ ಹತ್ರ" ಅಂದ.

ನಾನು ಒಂದುಕ್ಷಣ ತೆಪ್ಪಗಿದ್ದು,

"ನಷ್ಟವಿಲ್ಲ ಬಿಡಿ. ಆದರೆ ಒಂದು ಯೋಚನೆ, ಹತ್ತಾಣೆ ಟಿಕೇಟಿಗೆ ರೂಪಾಯಿ ಹನ್ನೆರಡಾಣೆ ಇಕ್ಕಿದವನು ಎಂಥಾ ಗುಗ್ಗು ಇರಬೇಕು ಅಂತ!" ಅಂದೆ.

"ಸರಿ ಸರಿ. ಈ ಚಿತ್ರ ಷುರುವಾದ ಹೊಸದರಲ್ಲಿ ನೋಡಬೇಕಾಗಿತ್ತು. ಐದಾಣೆ ಟಿಕೇಟುಗಳ್ನ ಎರಡೂ, ಎರಡೂವರೆ ಅಂತ ಮಾರಿದ್ದೇನೆ ನಾನು, ಇದೇ ಜಾಗದಲ್ಲಿ." ಅಂದ ಜಟ್ಟಿ. ನನ್ನ ಕುತೂಹಲ ಕೆರಳಿತು. ಎರಡು ಕಾಫಿಗೆ ಆರ್ಡರ್ ಮಾಡಿದೆ. ಜಟ್ಟಿ ಸೊಂಟದಿಂದ ಎರಡು ಬೀಡಿ ತೆಗೆದ.

"ಹೀಗೆ ಟಿಕೇಟುಗಳ್ನ ಹೆಚ್ಚಿಗೆ ಬೆಲೆಗೆ ಮಾರೋದರಲ್ಲಿ ಒಳ್ಳೇ ಲಾಭ ಇದೆ ಅಂತೀರೇನು?" ಅಂದೆ, ಮೆಲ್ಲಗೆ, ಹುಳ್ಳ ಹುಳ್ಳಗೆ.

"ಸಂದೇಹವೇ ಇಲ್ಲ. ಆದರೆ ಇದನ್ನು ಒಂದು ವೃತ್ತಿ ಅಂತ ಅವಲಂಬಿಸಿದರೆ ಲಾಭವೇ ಹೊರತು, ಯಾವತ್ತೋ ಒಂದಿನ ಕ್ಯೂನಲ್ಲಿ ಜಾಗಸಿಕ್ಕೆ ಬಿಡ್ತು ಅಂತ ಸಿಕ್ಕಿದ ಒಂದು ಟಿಕೇಟನ್ನ ಮಾರಿ ಸಂಪಾದಿಸೋದರಲ್ಲಿ ಏನು ನಫೆ ಇದ್ದೀತೋ" ಅಂದ ಅವನು.

"ಹಾಗಾದರೆ ನಿಮ್ಮದು ಇದೇ ವೃತ್ತಿಯೋ?"

"ಹೌದು. ನಾನು ಈಗ್ಗೆ ಸುಮಾರು ಐದು ವರ್ಷದಿಂದ ಇದೇ ವ್ಯಾಪಾರದಲ್ಲಿದ್ದೇನೆ. ಬೇರೆ ಯಾವ ವೃತ್ತಿಯನ್ನೂ ಕೈಕೊಳ್ಳೋ ಅಭಿಲಾಷೆ ನನಗಿಲ್ಲ."

"ಹಾಗಾದರೆ ಒಳ್ಳೇ ಲಾಭ ಇರಲೇಬೇಕು."

"ಅದಕ್ಕೇನು ಬಿಡಿ. ದಿನಕ್ಕೆ ಸರಾಸರಿ ಹತ್ತು ರೂಪಾಯಿ ಸಂಪಾದಿಸಬಹುದು, ಒಬ್ಬ ನುರಿತ ಕ್ಯೂ ಹಂದಿ."

"ಕ್ಯೂ ಹಂದಿ?"

"ಹೌದು. ಹಂದಿಗಳ ಹಾಗೆ ನಿರ್ದಾಕ್ಷಿಣ್ಯವಾಗಿ ಕ್ಯೂಗಳಲ್ಲಿ ಸ್ಥಳಗಳನ್ನ ಆಕ್ರಮಿಸಿಕೊಂಡು ಹೋಗುವ ನಮ್ಮನ್ನ ಕ್ಯೂ ಹಂದಿ ಅನ್ನುತ್ತಾರೆ ಜನಗಳು. ಕೇಳಿರಬಹುದು ನೀವೂ, ಅಂತ ಇದ್ದೆ."

"ಈಗ ತಿಳೀತು ಬಿಡಿ ನಿಮ್ಮ ಕಾರ್ಯಕಲಾಪಗಳು ಸಿನಿಮಾಮಂದಿರಗಳನ್ನ ಮಾತ್ರ ಆವರಿಸಿದೆಯೋ, ಅಥವಾ..........."

"ಹಾಗೇನಿಲ್ಲ. ಎಲ್ಲಿ ಕ್ಯೂ ಇದ್ದರೆ ಅಲ್ಲಿ ಹಾಜರು ನಾವು. ಆದರೆ ಸಿನಿಮಾಗಳಲ್ಲಿ ಸಂಪಾದಿಸಬಹುದಾದ ಲಾಭ ಬೇರೆ ಕ್ಯೂಗಳಲ್ಲಿ ಸಿಗೋದು ಅಪರೂಪ.

ಊರಿನಲ್ಲಿ ಅದ್ಭುತ ಚಿತ್ರಗಳು ಇಲ್ಲದಾಗ, -ಬೇರೆ ಕ್ಯೂಗಳ ಯೋಚನೆ ಮಾಡ್ತೇವೆ ಅನ್ನಿ."

"ಅದು ಸರಿ. ನಿಮ್ಮ ಅಭಿಪ್ರಾಯದಲ್ಲಿ ಕ್ಯೂ ಹಂದಿಯಾಗಬೇಕಾದವನಿಗೆ ಏನಾದರೂ ಸ್ಪೆಷಲ್ ಗುಣ ವಿಶೇಷಗಳಿರಬೇಕೇ? ಉದಾಹರಣೆಗೆ ನಾನೂ ಕ್ಯೂ ಹಂದಿಯಾಗಲು ಶಕ್ಯವೇ?"

ಜಟ್ಟಿ ನನ್ನನ್ನು ಆಪಾದಮಸ್ತಕವಾಗಿ ಒಂದು ಸಲ ಸಿಂಹಾವಲೋಕಿಸಿದ ಮೇಲೆ, ಮೆಲ್ಲಗೆ ಕೆಮ್ಮಿ ತಲೆಕೆರೆದುಕೊಂಡು ಕೇಳಿದ.

"ಯಾವಾಗಲಾದರೂ ವ್ಯಾಯಾಮ ಮಾಡಿ ಅಭ್ಯಾಸ ಇದೆಯೋ ನಿಮಗೆ?"

"ಇದೆ. ಅಂದರೆ....ಚಿಕ್ಕಂದಿನಲ್ಲಿ ಮಿಡ್ಲ್‌ಸ್ಕೂಲಿನ ವಿದ್ಯಾರ್ಥಿ ಆಗಿದ್ದಾಗ ಆಗಾಗ್ಗೆ 'ಕೊಕ್' ಆಟ ಆಡಿದ್ದೇನೆ. ಕಸರತ್ ಗಿಸರತ್ ಮಾಡಿದ್ದಿಲ್ಲ ಇದುವರೆಗೆ."

"ಹಾಗಾದರೆ ನಮ್ಮ ಕೆಲಸಕ್ಕೆ ನೀವು ಸುತರಾಂ ನಾಲಾಯಕ್ಕು, ಕ್ಷಮಿಸಿ. ಯಾಕೆ ಹೇಳ್ತೇನೆ ಅಂದರೆ, ಮೈಬಲ ಒಂದು ಬಿಟ್ಟರೆ ಕ್ಯೂ ಹಂದಿಯಾಗೋದಕ್ಕೆ ಬೇರೆ ಯಾವ ಸಾಮರ್ಥ್ಯವೂ ಅಗತ್ಯವಿಲ್ಲ. ಒಂದು, ಗಟ್ಟಿಮುಟ್ಟಾದ ಕಾಯ ಇರಬೇಕು. ಎರಡು, ಹೇಸರ ಕತ್ತೇನ ನಾಚಿಸೋ ತಾಳ್ಮೆ ಇರಬೇಕು. ಕ್ಯೂ ನಲ್ಲಿ ಕಾಯೋದಕ್ಕೆ, ಅಷ್ಟೆ. ಇದರೊಟ್ಟಿಗೆ ವ್ಯಾಪಾರಕ್ಕೆ ಅಸಲು ಹತ್ತಾಣೆ ಆದ್ರೂ ಇರಬೇಕು ಅಂತ ಹೇಳಬೇಕಾಗೇ ಇಲ್ಲವಲ್ಲ ಪ್ರತ್ಯೇಕವಾಗಿ, ಹಿ ಹಿ ಹಿ!"

ಜಟ್ಟಿಯ ಹಾಸ್ಯಪ್ರವೃತ್ತಿಯನ್ನು ಮೆಚ್ಚಿದ ಸೂಚನೆಯಾಗಿ ನಾನೂ ಅವನ ಜತೆಗೆ ಸ್ವಲ್ಪಹೊತ್ತು ಗಹಗಹಿಸಿದೆ. ಕ್ಯೂ ಹಂದಿಯ ನಿತ್ಯಜೀವನದ ವಿಚಾರವಾಗಿ ಇನ್ನೆರಡು ಸಮಸ್ಯೆಗಳು ಉಳಿದಿದ್ದವು, ನನ್ನ ಮನಸ್ಸಿನಲ್ಲಿ, ಅವನನ್ನೇ ವಿಚಾರಿಸಿದೆ.

"ನಿಮ್ಮ ಕೆಲಸಕ್ಕೆ ಅಡಚಣೆಯಾಗಿ ಯಾರೂ ಬರೋದಿಲ್ಲವೇನು? ಅಂದರೆ ....ಪೋಲೀಸರು....ಇತ್ಯಾದಿಯಾಗಿ?"

"ಅದೇನೂ ಹೆದರಬೇಕಾದ ಪ್ರಸಂಗ ಬರೋದೇ ಇಲ್ಲ ನಮಗೆ. ಇವತ್ತೆಲ್ಲ ನಾವು ಒಂದೊಂದು ಷೋಗೆ ಕೊಂಡುಕೊಳ್ಳೋದು ಒಂದರ್ಧ ಡಜನ್ ಟಿಕೆಟ್ಟುಗಳು. ಅವುಗಳನ್ನ ತೆಗೆದುಕೊಳ್ಳೋಕೆ ಕುರಿಗಳು— ಮಂದೆ ಮಂದೆಯಾಗಿ ಓಡಾಡುತ್ತಿರೋವರೆಗೂ ನಮಗೆ ಯಾವ ಅಡ್ಡಿ ಹೇಳಿ!"

"ಈ ದಿನ ಎಷ್ಟು ಟಿಕೆಟ್ಟು ನೀವು ಕೊಂಡದ್ದು?"

ಚಟ್ಟಿ ತಾನು ಮುಕ್ಕಾಲು ಸೇದಿದ್ದ ಬೀಡಿಯನ್ನು ಕಾಲಡಿಯಲ್ಲಿ ಹಾಕಿ ಉಜ್ಜಿ ಆರಿಸಿ ಹೊಸ ಬೀಡಿ ಹೊತ್ತಿಸಿ ಹೇಳಿದ.

' ಕೇಳಿ. ನಿಮ್ಮಲ್ಲೇನು ಮುಚ್ಚುಮರೆ ನಮಗೆ! ಈ ಸಿನಿಮಾದಲ್ಲಿ ತಲಾ ಐದೈದು ಟಿಕೆಟ್ಟಿಗೆ ಮಿಾರಿ ಕೊಡೋದಿಲ್ಲ. ಸರಾಸರಿ ಒಂದೊಂದು ರೂಪಾಯಿನ ಹಾಗೆ ಐದು ರೂಪಾಯಿ ಲಾಭ ಬಂದಿದೆ ಈ ಒಂದು ಆಟಕ್ಕೇನೇ. ''

" ಇನ್ನೊಂದು ವಿಷಯ. ಈ ವ್ಯಾಪಾರದಲ್ಲಿ ಒಂದಕ್ಕೆರಡು ಕಕ್ಕಿ ಒದೆತಿಂದ ಪ್ರಾಣಿಗಳು ಒಳಗೊಳಗೇ ಕುದಿಯುತ್ತ ಪೋಲೀಸು ಗೀಲೀಸರಿಗೆ ಹೇಳಿ ನಿಮ್ಮನ್ನ ಬಿಟ್ಟುಕೊಟ್ಟುಬಿಡುವ ಪ್ರಮೇಯ ಬರೋದಿಲ್ಲವೇ ?"

" ಓಹೋ! ಅಂಥಾ ಕೇಸುಗಳು ಬರುತ್ತಲೇ ಇರ್ತವೆ, ಆದರೆ ನಮ್ಮನ್ನ ಸವಾಲು ಮಾಡೋವರಿಗೆ ಸಾಕ್ಷಿ ಇಲ್ಲದೇ ರುಜುವಾತು ಇಲ್ಲದೇ ಇರೋದರಿಂದ ನಮಗೆ ಯಾವ ತೊಂದರೇನೂ ಒರೋದಿಲ್ಲ. ಹಾಗೂ ಒಬ್ಬ ಬೇಹುಷಾರಿ ಕ್ಯೂ ಹಂದಿ ಮೊನ್ನೆ " D. D. T. " ಟಾಕೀಸಿನಲ್ಲಿ ಸಿಕ್ಕಿಬಿದ್ದ."

" ಅದು ಹ್ಯಾಗೆ ?"

' ಆದದ್ದಿಷ್ಟು. ಅವನು ಏನೋ ಬುದ್ಧಿ ಇಲ್ಲದ ಬೇವಾರ್ಸಿ. ನಮ್ಮಗಳ ಹಾಗೆ ಸಲಸಲಕ್ಕೂ ಬೇರೆಬೇರೆ ಸಿನಿಮಾಗಳಲ್ಲಿ ಬೇರೆಬೇರೆ ಕ್ಯೂಗಳನ್ನ ಆಕ್ರಮಿಸೋದು ಬಿಟ್ಟು, ಒಂದುವಾರ ಒಂದೇ ಸಮನೆ " D D T. " ಟಾಕೀಸಿನ ಐದಾಣೆ ಕ್ಯೂನಲ್ಲಿ ಪ್ರತಿ ಆಟಕ್ಕೂ ಮೊಟ್ಟಮೊದಲಾಗಿ ನಿಲ್ಲೋದಕ್ಕೆ ಷುರುಮಾಡಿದ. ಸರಿ ಯಾವನೋ ಸಿ. ಐ. ಡಿ. ಗುಮಾನಿ ಮಾಡಿದ ಅವನಮೇಲೆ. ಒಂದು ದಿನ ಕುರಿಯ ವೇಷದಲ್ಲಿ ಒಂದೈದಾಣೆ ಟಿಕೆಟ್ಟು ಅವನಿಂದ ತೆಗೆದುಕೊಂಡು ಎರಡು ರೂಪಾಯಿ ನೋಟೊಂದನ್ನ ಅವನ ಕೈಲಿಟ್ಟ. ನೋಟಿನಮೇಲೆ ಪೋಲೀಸು ಇಲಾಖೆಯ ಮುದ್ರೆ ಇದ್ದದ್ದು ಕ್ಯೂಹಂದಿಯ ಗಮನಕ್ಕೆ ಬಲಿರಲ್ಲ. ಕಡೇಗೆ ಹಾಕಿದರು ಅವನಿಗೆ, ಆರು ತಿಂಗಳು ಸಾದಾ.''

" ಅಯ್ಯೋ, ಪಾಪ ! ''

" ಇನ್ನೊಂದು ಸಾರ್ತಿ. ಇದೇ ' ಚಂದ್ರೋದಯ ' ಹೊಸದಾಗಿ ತೋರಿಸಿದಾಗ, ಒಬ್ಬೊಬ್ಬನಿಗೆ ಕೊಡೋದು ಇಷ್ಟಿಷ್ಟೇ ಟಿಕೇಟು ಅಂತ ನಿರ್ಧಾರ ಇರಲಿಲ್ಲ. ಸರಿ, ನೋಡಿ, ಹನ್ನೆರಡು ಗಂಟೇಗೆ ಇಳಿದವನು ಹನ್ನೆರಡಾಣೆ ಕ್ಯೂನಲ್ಲಿ, ತಿರುಗಿ ರಾತ್ರಿ ಎಂಟಕ್ಕೇನೇ ಆಚೆಗೆ ಬಂದದ್ದು ನಾನು. ಆದರೂ ಬಲೀ ಹುಷಾರಿ. ಒಬ್ಬನ ಹತ್ತಿರಲೂ ನೋಟು ಈಸಿಕೊಳ್ಳಲಿಲ್ಲ. ಯಾವ ಯಾವ ನೋಟಿನಲ್ಲಿ ಯಾವ ಯಾವ ಏಟು ಕಾದಿರುತ್ತೋ ಅಂತ ಕೇಳಿದ್ದೀರಲ್ಲಾ ಗಾದೇನ. ..."

" ಹೂ ಹೂ ಕೇಳಿದ್ದೀನಿ. ''

" ಸರಿ, ಚಿಲ್ರೆ ಚಿಲ್ರೆಯಾಗೇ ಭರ್ತಿ ಮಾಡಿದೆ ಲಾಭವನ್ನ ಚಡ್ಡಿ ಜೇಬು ಗಳಲ್ಲಿ. ಕ್ಯಾಬಿಟ್ಟು ಬರೋವೇಳೆಗೆ ಎರಡು ಜೇಬುಗಳೂ ಇದ್ದ ಭಾರಕ್ಕೆ ನಡೆದು ಕೊಂಡು ಹೋಗೋದೇ ಅಸಾಧ್ಯ ಆಗಿಹೋಯ್ತು. ಟಾಕ್ಸಿಮಾಡಿಕೊಂಡು ಮನೇಗೆ ಹೋದೆ ; ಯಾರಪ್ಪನ ಮನೆ ಗಂಟು ಏನುಹೋಯ್ತು ಬಿಡಿ, ಅವತ್ತಿನ ಲಾಭ ನೂರಾ ಇಪ್ಪತ್ತು ಚಿಲ್ರೆ ಅಂದಮೇಲೆ ! ''

" ಅಂತೂ ಕ್ಯೂನಲ್ಲಿ ಮೊದಲ್ನೇ ಜಾಗವೇ ಸಿಕ್ಕಿಬಿಡುತ್ತಲ್ಲ ಹ್ಯಾಗೋ ನಿಮಗೆ ! ''

" ಅದೇನು ಆಶ್ಚರ್ಯವಲ್ಲ. ಒಂದೊಂದು ಕ್ಯೂವಿಗೂ ಒಬ್ಬೊಬ್ಬ ಮರಿ ಕ್ಯೂಹಂದಿ ಇರ್ತಾನೆ. ಇವರು ಬೆಳಗ್ಗಿನಿಂದಲೇ ಹಾಜರು, ಒಂದೊಂದು ಟಿಕೆಟ್ ಕಿಟಿಕಿಯ ಮುಂದೆಯೂ. ನಾವು ಸ್ವಲ್ಪ ನಿಧಾನವಾಗಿ ಬಂದರೂ ಮರಿ ಹಂದಿ ಗಳಿಗೆ ತಕ್ಕ ಸಂಭಾವನೆ ಕೊಟ್ಟು ಅವರ ಸ್ಥಾನಗಳನ್ನು ಕೊಂಡುಕೊಂಡು ಅವರನ್ನ ಮನೆಗಳಿಗೆ ಒದೆದೋಡಿಸಿ ಬಿಡ್ತೇವೆ. ಅವರಿಗೂ ನಷ್ಟವಿಲ್ಲ. ಸುಮ್ಮನೆ ನಿಂತ ಕಡೆ ನಿಂತು ಲಾಭ ಬಂದ ಹಾಗಾಯ್ತು ; ಎಲ್ಲಾದರೂ ಟಿಕೀಟು ಮಾರಿ ಸಿಕ್ಕಿ ಕೊಳ್ಳೋ ಅಪಾಯವೂ ಇಲ್ಲ. ''

" ಸರಿಯೇ, ಈ ಚಿತ್ರಕ್ಕೆ ಇಷ್ಟು ನೂಕುನುಗ್ಗಲು ಇದೆಯಲ್ಲ, ಇದೇನು ಅಷ್ಟು ಚೆನ್ನಾಗಿದೆಯೆ ? ''

" ನೋಡಿದೋರು ಯಾರು ! ನಾನು ಸಿನಿಮ ನೋಡಿ ಆರುವರ್ಷ ಆಯಿತು, ಸರಿಯಾಗಿ. .... ಎದ್ದೇಳಿ ಮತ್ತೆ ರಾತ್ರಿ ಆಟಕ್ಕೆ ಕ್ಯೂನಿಲ್ಲೋ ಹೊತ್ತಾಯ್ತು, ನನಗೆ. ನೀವೂ ಊಟಗೀಟ ಮುಗಿಸ್ಕೊಂಡು ಮತ್ತೆ ಬನ್ನಿ , ಬೇಕಾದರೆ ಕೊಡ್ತೇನೆ, ಒಂದು ಹತ್ತಾಣೆ ಟಿಕೆಟ್ಟು. ....ಹೆದರಬೇಡಿ. ಅಸಲು ಕೊಡಿ ಸಾಕು ! " ಎಂದು ಭರವಸೆ ಕೊಟ್ಟು ನನ್ನ ಬೆನ್ನುತಟ್ಟಿ, ಜಟ್ಟಿ ಮೇಲೆದ್ದು ಕಾಫಿ ಲೋಟ ದಲ್ಲಿ ಉಳಿದಿದ್ದ ಕಾಫಿಯನ್ನು ಬಾಯಿಗೆ ಬಸಿದುಕೊಂಡು, ಮೇಜಿನಮೇಲಿದ್ದ ಬಿಲ್ಲಿನ ಮೇಲೆ ಕಾಲುಕಾಲಾಣೆಯಾಗಿ ಎಣಿಸಿ ಎಂಟಾಣೆ ಗುಡ್ಡೆ ಹಾಕಿದ.

—ಪುಂಗನೂರು ಪಾಪಯ್ಯ.

ಶಿವನ ಸಂಸಾರ

ಹಿಂದೆ ದೇವಾಸುರರು ಅಮೃತವ
ಪಡೆಯೆ ಹಾಲಿನ ಕಡಲು ಕಡೆದುದನು—
ಮಂದರಕೆ ವಾಸುಕಿಯ ಬಳಸಿ
ಕಡೆದ ಮೊದಲಿಗೆ ವಿಷವ ಪಡೆದುದನು— ೧

ಸುಡುವ ಹಾಲಾಹಲವ ತಾನೇ
ಲೋಕರಕ್ಷಕ ಶಿವನೆ ಕುಡಿದುದನು—
ಕುಡಿದು, ' ನಂಜನು ಉಂಡವನೆ ನಂ-
ಜುಂಡ ' ಎನ್ನುವ ಹೆಸರು ಮುಡಿದುದನು.... ೨

ಕೇಳಿರುವಿರೀ ನಾಡಮಕ್ಕಳು
ಕತೆಯನಿದ– ಶಿವ ನಂಜು ಹೀರಿದುದ
ಬೇರೆ ಕತೆಯೊಂದುಂಟು ನಂಜುಂ-
ಡನದ– ಕೇಳಿರಿ, ಇದಕು ಮೀರಿದುದ ೩

ಬನ್ನಿ, ಮಕ್ಕಳೆ, ಕುಳಿತು ಕೇಳಿರಿ
ಶಿವನ ಸಂಸಾರದ ಪಜೀತಿಯನು
ಏಕೆ ಕುಡಿದನೊ ವಿಷವ—ತಿಳಿಸುವು
ದನು, ವಿನೋದಕೆ ನಗುವ ರೀತಿಯನು ೪

ಪತ್ನಿಯರು ಪರಶಿವನಿಗಿಬ್ಬರು :
ತಲೆಯನೇರಿದ ಗಂಗೆ ಮೊದಲಾಕೆ ;
ಕೈಹಿಡಿದ ಗಂಡನನೆ ಅರೆಹೆಣ್
ಆಗಿಮಾಡಿದ ಗಿರಿಜೆ ಬಳಿಯಾಕೆ ೫

ಮನೆಯ ಮಕ್ಕಳೊ – ಒಬ್ಬನಿಗೆ ಮುಖ
ವಾರು, ಮತ್ತೊಬ್ಬನಿಗೆ ಆನೆ ಮುಖ
ನವಿಲನೇರಿ ಸವಾರಿಮಾಡುವ-
ನೊಬ್ಬ, ಇನ್ನೊಬ್ಬನಿಗೆ ಇಲಿಯೆ ಸುಖ ೬

ಏಕೆಯೋ ನಾ ಕಾಣೆ, ಶಿವನಿಗೆ
ತೋಳು ಕೊರಳೊಳು ಹಾವುಗಳ ಮಾಲೆ
ಇತ್ತ, ಗೌರಿಯ ಸಿಂಹ, ಆ ಕಡೆ
ತನ್ನ ವೃಷಭ ; ಮನೆಯೆ ಮೃಗಶಾಲೆ ! ೭

ಶಿವನ ಪುಣ್ಯವೆ ಪುಣ್ಯ ! ಪತ್ನಿಯ
ರೊಳಗೆ ಇಲ್ಲವೆ ಇಲ್ಲ ಅನ್ಯೋನ್ಯ
' ನನಗೆ ಮಡಿಲೇ ಇವಳಿಗೋ ತಲೆ ! '
ಎಂದು ಗಿರಿಜೆಗಸೂಯೆ ಸಾಮಾನ್ಯ ೮

ಕೆಳಗೆ ಕುಳಿತವಳೆಷ್ಟು ಕೆರಳಿದ-
ರಷ್ಟು ಗುಳುಗುಳು ನಗುವಳಾ ಗಂಗೆ !
ನಕ್ಕವಳ ಜೊತೆ ನಕ್ಕು, ನಿಗಿನಿಗಿ
ಕೋಡು ಬೆಳೆವುದು ಚಂದ್ರನಾತಂಗೆ ! ೯

" ಸಡಿಫಡೀ ಲೋಕಗಳ ಸುಡುವೀ
ನನ್ನ—ಫಾಲಾಗ್ನಿಯ – ತೃಣೀಕರಿಸಿ
ಮೇಲೆ ಮೆರೆವನೆ ಶೀತಕಿರಣ ! "
ಎಂದು ಭುಗಿಲುವನಗ್ನಿ ಹೂಂಕರಿಸಿ ೧೦

" ಇಂತಿವರ ನಾನೆಲ್ಲಿ ತಂದೆನೊ—
ಶಿವಶಿವಾ ಈ ಎಣ್ಣೆಸೀಗೆಗಳ ! "
ಎಂದುಕೊಳುವನು ತ್ರಿಪುರಹರನಾ
ತಡೆಯಲಾರದೆ ಅವರ ಬೇಗೆಗಳ ೧೧

ಜೊತೆಗೆ, ಭಿಕ್ಷಾಟನವ ನಂಬಿ
ನಿತ್ಯ ಏಕಾದಶಿಯೆ ಮನೆಯಲ್ಲಿ
ಹೊಟ್ಟೆ ಹಸಿವಿಗೆ ಯಾರ ತಡೆಯೇನ್ !
ಒಂದ ನುಂಗುವುದೊಂದು ಮನದಲ್ಲಿ ೧೨

ಇಲಿಯ ನೋಡುತ ನಾಗ ನೆಗೆವುದು,
ಬಯಸಿ ನಾಗನ ನವಿಲು ಕುಕ್ಕುವುದು ;
ಗಜಮುಖನ ಗಜವೆಂದೆ ಭ್ರಮಿಸಿ
ಸಿಂಹ ಘಟ್ಟಿಂದವನಿಗಿಕ್ಕುವುದು ೧೩

‘ ವಿಘ್ನಮದಸಾಮಜಕೆ ಪಂಚಾ-
ನನನು ನಾನ್ ’ ಎಂದಿತ್ತ ಗಜಮುಖಗು—
‘ ಕೊಂದೆನಾ ತಾರಕನ, ‘ಕ್ರೌಂಚವ
ಸೀಳಿದೆನು ’ ಎಂದತ್ತ ಷಣ್ಮುಖಗು— ೧೪

ನಿತ್ಯ ಪೋಟಾಪೋಟಿ ಮಲ್ಲಾ
ಮಲ್ಲಿ ಮುಷ್ಟಾಮುಷ್ಟಿ ಕಡುಕದನ !
ನೋಡಿ ಶಿವ ನಿಟ್ಟುಸಿರು ಬಿಡುವನು !
ಆಯ್ತು ಕಿರು ಕುರುಭೂಮಿ ಶಿವಸದನ ! ೧೫

ಈ ಮಹಾಕೋಲಾಹಲದೊಳಾ
ಬಡವು ಬಸವನಿಗೆಲ್ಲಿಯೋ ಮೇವು !
ಶಿವನ ಹೊಂಜೆಡೆ ಹುಲ್ಲುಮೆದೆ ಎನಿ-
ಸಿತ್ತು ! ಅಗಿವರೆ ನಾರು ! ಥೂ ! ಬೇವು ! ೧೬

ಈ ತೆರದ ಮನೆವಾರ್ತೆಗಾರದೆ
ಶಿವನು ಸ್ವೈರಣೆಗೆಟ್ಟು ವಿಷ ತೇದು,
ತುಂಬಿ ಬಟ್ಟಲನೆತ್ತಿ ಹೀರಲು—
ಕೊರಲು ಕರಿಗುರುತಾಯ್ತುರಿದು ಸೀದು ! ೧೭

ಅಂದಿನಿಂ ವಿಷಕಂಠನೆನಿಸಿ,
ನೀಲಕಂಠನುಮೆನಿಸಿ ಹೆಸರಾಗಿ,
ಅಮೃತನಾ ಶಿವ ತನ್ನ ಸಂಸಾ-
ರದಲಿ ಬದುಕಿದ—ತಾಗದೆಯು ತಾಗಿ ೧೮

ಮಕ್ಕಳೀ ಕತೆ ಕೇಳಿದಿರಿ—ಹೊಸ
ತಿದಕೆ ನೀವೇನೆನುವಿರೋ ಕಾಣೆ
ಆದರಿದು ನಿಜವಿರಲಿ ಸುಳ್ಳೇ
ಇರಲಿ—ಸೊಗಸೋ ಸೊಗಸು ನನ್ನಾಣೆ ೧೯

—ಗುಂಡಯ್ಯ.

ಸಾಹಿತಿಯ ಸಂಭಾವನೆ

—o—

ಸಾಹಿತಿಯಾಗಿ ಸಂಸಾರ ಸಾಗಿಸಬೇಕಾದರೆ ಸಂಭಾವನೆ ಇಲ್ಲದಿದ್ದರೆ ಸಾಧ್ಯವೆ? ಆದರೆ ಸಂಭಾವನೆ ಪಡೆಯುವ ಭಾಗ್ಯ ಯಾರಿಗಿದೆ ? ವಾಚಕರೆ, ನಿಮ್ಮ ಮುಂದೆ ಸವೆದ ಸಾಹಿತಿಯೊಬ್ಬ ಸಂಭಾವನೆಗಾಗಿ ಮಾಡಿದ ಸಾಹಸದ ಕತೆಯನ್ನು ಹೇಳುವ ಆಸೆಯಾಗಿದೆ. ಪರಾಂಬರಿಸಬೇಕು.

ಸನ್ ಸಾವಿರದೊಂಭೈನೂರಾ ನಲವತ್ತೆರಡು ಸಂವತ್ಸರ ಸಾಂಕುಶ ಪ್ರಭುತ್ವ ಸಾಧನೆಗಾಗಿ ಸತ್ಯಾಗ್ರಹ ಸಾಹಿತಿ ಸಾಂಬಶಿವಯ್ಯನ ಜೈಲುವಾಸ. ಯಾರೋ ಜೈ ಜೈ ಅಂದಾಗ – ಗುಂಪಿನಲ್ಲಿದ್ದವನೇಲೆ ಗೋವಿಂದ ಅನ್ನದೆ ಉಂಟೆ ? ಎಂದು ದರದರನೆ ಎಳೆದು ಲಾಠಿ ಬೀಸಿ ಜೈಲು ತೋರಿಸಿದರು ಅಂದಿನಿಂದಲೇ- ಆ ಜೈಲು ವಾಸದಿಂದಲೇ ಸಾಂಬಶಿವ ಸ್ಫೂರ್ತಿಗೊಂಡು ಸಾಹಿತಿ ಎನಿಸಿದ. ಸಾಕು ಸಾಕೆನಿಸು ವವರೆಗೆ ರಾಗಿ ಬೀಸಿಸಿದಾಗಲೇ ಬಿಸಿರಕ್ತ ಕುದ್ದು "ಸಾಕಿನ್ನು ಈ ದಾಸ್ಯ" ಎಂಬ ಕ್ರಾಂತಿಕಾರಕ ಕತೆ ಜನ್ಮ ತಾಳಿತು.

ಸಂದುಗೊಂದುಗಳಿಂದ ಹೊರಬೀಳುತ್ತಿದ್ದ "ಶ್ರಾಂತಿ", "ಬ್ರಿಟೀಷರ ಭ್ರಾಂತಿ" "ಕೋವಿಯ ಕೂಗು" ಮುಂತಾದ ಹಸ್ತಪತ್ರಿಕೆಗಳ ಕರ್ತೃ ಸಾಂಬಶಿವ. ಅವನ ಸಾಹಿತ್ಯಸೇವೆ ಮೊದಲು ಮೊಳಕೆ ಕಂಡದ್ದು ಜೊತೆಗೆ ಓದುತ್ತಿದ್ದ ಮೀನಾಕ್ಷಿಯ ಎರಡು ಜಡೆ ಹೆರಳು ಕಂಡಾಗ. ಸಸಿಯಾಗಿ ಬೆಳದದ್ದು ಸೋದರಮಾವ ಇವನಿಗೆ ಸಾಹಿತ್ಯದ ಸವಿ ತೋರಿಸಿ ನಾಟಕ ಪದ್ಯ ಓದಿ ಹೇಳಿದಂತೆ ಪುಸ್ತಕ ಓದಿಸಿದ ಮೇಲೆ.

ಈಗ ಈ ಜೈಲುವಾಸ ಆ ಸಸಿಯನ್ನು ಗಿಡವನ್ನಾಗಿ ಮಾಡಿತು. ದಲಿತರು, ದಾಸ್ಯ, ಗುಲಾಮು ಕಾರ್ಮಿಕ, ಮೋಸ ತಟವಟ, ವಂದಿಮಾಗದರು. ಹರಿಜನೋದ್ಧಾರ, ನೆತ್ತರು, ಬಡವರ ಬಾಳಿನ ಗೋಳು. ಗೂಳಿಯ ಕೂಗು - ಒಂದಲ್ಲ ಹತ್ತಲ್ಲ ನೂರಾರು ಸಮಸ್ಯೆಗಳು ಈ ಸಂಭಾವಿತ ಸಾಹಿತಿಯ ಶಿರವನ್ನು ಸೇರಿತು. ರಚನಾತ್ಮಕ ಸಾಹಿತ್ಯ ನಿರ್ಮಿಸಿ ಸಾಹಿತ್ಯ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿ ಅಲ್ಲೋಲ ಕಲ್ಲೋಲ ಮಾಡಬೇಕೆಂಬುದೇ ಈ ಸಾಂಬಶಿವನ ಹಿರಿದಾಸೆ.

ಜೈಲಿನಿಂದ ಹೊರ ಬಂದಮೇಲೆ ಕತೆಗಳ ಕಂತೆಯೇ ಅವನ ಕೊಂಕುಳಲ್ಲಿ ಕುಳಿತು ಬಂತು. ಸಂಪಾದಕರುಗಳು ತಾಮುಂದು ನಾಮುಂದೆಂದು ಬಂದು

ತನ್ನನ್ನು ಆದರಿಸಿ ಸತ್ಕರಿಸಿ ಹಾರ ಹಾಕಿ ಕರೆದೊಯ್ದು ತನ್ನ ಕಂಕುಳಲ್ಲಿದ್ದ ಕತೆಗಳ ಕಂತೆಯನ್ನು ಇಳಿಸಿಕೊಂಡು ನೋಟುಗಳ ಕಂತೆಯನ್ನು ಕೊಡುವರೆಂದು ನಂಬಿದ್ದ. ಗ್ರಂಥಪ್ರಕಾಶಕರು ಚಕ್ಕು ಬುಕ್ಕು ಕೊಟ್ಟು ಕರಡು ಪ್ರತಿ ಒಯ್ಯುವರೆಂದು ಕಾದು ಕುಳಿತ. ಆದರೆ !!! ಸಾಂಬುವೇ ಅವುಗಳನ್ನು ಹೊತ್ತು ತಿರುಗುವಂತಾಯ್ತು. ಪ್ರಕಟವಾದ ಪುಸ್ತಕಗಳಿಗೆ ಅಚ್ಚಾದ ಐವತ್ತು ಪ್ರತಿಗಳೇ ಸಂಭಾವನೇ- ಅದನ್ನು ಧರ್ಮಕ್ಕೆ ಹಂಚುವುದೂ ಪ್ರಯಾಸವಾಯ್ತು.

ಈ ಗಾಳಿಗೋಪುರ ತೂರಿ ಹೋದಾಗ ಸಾಂಬಶಿವ ವಾಸ್ತವ ಪ್ರಪಂಚ ಕಂಡ. ಈ ತೆರನಾದ ಸಾಹಿತಿಯಾಗಿ ಎರಡು ಹೊತ್ತು ಲೇಖನೀ ಬಲದಿಂದಲೇ ಊಟ ಮಾಡುವುದು ದುಸ್ಸಾಧ್ಯವೆಂಬುದನ್ನು ಮನಗಂಡ. ಆಗಲೇ "ಮನವಾಣಿ" ಪತ್ರಿಕೆ ಸೇರಿದ್ದು.

ಸಾಂಬಶಿವನ ಸಾಹಿತ್ಯ ಹಾರಿ ಹೋಗಿದೆ. ಬೆಳಗಿನಿಂದ ಸಂಜೆಯವರೆಗೂ "ಆಂಗ್ಲಪತ್ರಿಕೆಗಳನ್ನು ಭಾಷಾಂತರಿಸುವುದರೊಳಾಯ್ತು ಎನ್ನಯ ಶೌರ್ಯಂ" ಎಂದು ಕಾಲಾ ಹಾಕಿಕೊಂಡಿದ್ದಾರೆ ಉಪಸಂಪಾದಕರು ಸಾಂಬಶಿವರು.

ಶಿವ ಶಿವ ಘೋರಾರಣ್ಯದೊಳು ಭಿಕ್ಷೋ ಭಿಕ್ಷ.

—ದಾಶರಥಿ ದೀಕ್ಷಿತ್.

[ಸಾಹಿತ್ಯ ಸೇವೆಗೆ ಗುಂಪಿನಲ್ಲಿ ಗೋವಿಂದ ಎಂದವರು, "ಶ್ರಾಂತಿ" "ಬ್ರಿಟೀಷರ ಭ್ರಾಂತಿ" "ಕೋವಿಯ ಕೂಗು" "ಚಪ್ಪಲಿ ಸಪ್ಪಳ" ಮೊದಲಾದ ಬಿಸಿ ನೆತ್ತರ ಕೃತಿಗಳನ್ನು ಹೊಟ್ಟೆ ಹೊರೆಯಲು ಬರೆದವರು, ಇತ್ಯಾದಿಗಳೂ ಆದ ಸಾಂಬಶಿವರಿಗೆ ಮನವಾಣಿಯೇ ಗತಿ- ಹೊಟ್ಟೆ ಹೊರೆಯಲು— ಸಾಹಿತ್ಯವು ಇವೆಲ್ಲಕ್ಕೂ ಮೀರಿದ್ದು, ಎಂಬುದನ್ನು ಲೇಖಕರು ಬಲು ಚೆನ್ನಾಗಿ ವ್ಯಂಗಿಸಿದ್ದಾರೆ. ಸ್ಥಳ ಸಂಕೋಚದಿಂದ ಸುಖದ ಭಾಗವನ್ನು ಮಾತ್ರ ಪ್ರಕಟಿಸಿದ್ದೇವೆ ಸಂ.]

———o———

ಕರ್ನಾಟಕ ಏಕೀಕರಣಕ್ಕೆ ಈಗ ಒಂದೇ ಸಮಸ್ಯೆ ಉಳಿದಿದೆಯಂತೆ—

—'ಯಾರಿಗೆ ಯಾರನ್ನು ಕೊಟ್ಟು ಮದುವೆಮಾಡಬೇಕು— ಈ ಸ್ತ್ರೀ ಸ್ವಾತಂತ್ರ್ಯ ಯುಗದಲ್ಲಿ' ಅಂತ.